ಬಗೆಹರಿಯುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು, ರಮೇಶ್ ಕುಮಾರ್‌ರವರು ಹೇಳಿದ್ದಾರೆ. ತಾವು ಕೂಡ ಅವರಿಗೆ ಹೇಳಿ. ಅವರೂ ಬರಲಿ. ಬಂದು ಅವರು ಉತ್ತರ ಕೇಳಲಿ. ನಾವು ಕೂಡ ಸದನದಲ್ಲೇ ಕುಳಿತಿರುತ್ತೇವೆ. ಉತ್ತರ ಕೊಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:–ಮಾನ್ಯ ಅಧ್ಯಕ್ಷರೆ ತಾವು ಅವರನ್ನು ಕರೆಸಬೇಕು. ಏಕೆಂದರೆ, ಒಂದು ಹಂತದಲ್ಲಿ ನಿರ್ಣಯವಾಗಿ ಯಾವುದೋ ಪ್ರೆಸ್ಟೀಜ್‌ಗೆ, ಹಳ್ಳಿಗಾಡಿನ ಜನರಿಗೆ, ರೈತರಿಗೆ ಅನ್ಯಾಯವಾಗುವುದು ಬೇಡ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಳಕ್ಕೆ ಆಗಮಿಸಿದರು)

ಶ್ರೀ ವಾಟಾಳ್ ನಾಗರಾಜ್:– ಈಗ ಸದನವನ್ನು ತಾವು 10 ನಿಮಿಷ ಮುಂದೂಡಿ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ತಮ್ಮ ಕಾರ್ಯಾಲಯದಲ್ಲಿ ಮಾತುಕತೆಯಾದ ನಂತರ ನಾವೀಗ ಅವರ ಜೊತೆ ಮಾತನಾಡಿದ್ದೇವೆ. ದಯವಿಟ್ಟು ನನ್ನ ಮನವಿಯನ್ನು ಸ್ವೀಕರಿಸಿ ಈಗ ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ಅಲ್ಲಿ ಮಾತನಾಡಿ ತೀರ್ಮಾನ ತೆಗೆದುಕೊಳ್ಳೋಣ.

ಅಧ್ಯಕ್ಷರು:– ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 10.50ಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ 11 ಗಂಟೆ 31 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠದಲ್ಲಿದ್ದರು)

2) ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಅಧಿವೇಶನ ಪ್ರಾರಂಭವಾದಾಗಿನಿಂದ ಈ ರಾಜ್ಯದ ಜನರ ಜ್ವಲಂತ ಸಮಸ್ಯೆಗಳನ್ನು ತೆಗೆದುಕೊಂಡು ಅದು ಕುಡಿಯುವ ನೀರು, ವಿದ್ಯುತ್ ಕ್ಷಾಮವಿರಬಹುದು, ಬೇರೆ ಸಮಸ್ಯೆಗಳು ಇರಬಹುದು, ಅದರ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಒಂದು ನಿಮಿಷ ಧರಣಾ ಮತ್ತು ಸತ್ಯಾಗ್ರಹ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಅಧ್ಯಕ್ಷರು ನಮಗೆ ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟು ಎಲ್ಲಾ ಶಾಸಕರುಗಳಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಗಂಭೀರವಾದಂತಹ ಕಳೆದ 7–8 ದಿನಗಳಲ್ಲಿ ಅನೇಕ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ಈ ಅಧಿವೇಶನವನ್ನು ರಾಜ್ಯಪಾಲರ ವಂದನಾನಿರ್ಣಯದ ಬಗ್ಗೆ ಕರೆದಿದ್ದರೂ ಸಹ ಕುಡಿಯುವ ನೀರು ಮತ್ತು ವಿದ್ಯುತ್ ಕ್ಷಾಮದ ಬಗ್ಗೆ ಆದ್ಯತೆಯನ್ನು ಕೊಟ್ಟು ಈ ಭಾಗದ ಎಲ್ಲಾ ಶಾಸಕರುಗಳೂ ಕೂಡ ಮಾತನಾಡಿದ್ದೇವೆ. ನಮ್ಮ ಅಪೇಕ್ಷೆ ಇಷ್ಟೆ, ಶಾಸಕರು ಬೇರೆ ಎಲ್ಲರಿಗಿಂತ ಬಹಳ ಎತ್ತರದವರು. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ವಿಶ್ವಾಸವಿಲ್ಲ ಈ ಭಾವನೆ ನಾಡಿನ ಜನರಿಗೆ ಬರುವುದು ಬೇಡ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಾಗಬೇಕು, ಕಳೆದ 3–4 ತಿಂಗಳಿಂದ ನಿಮ್ಮ ನೂರಾರು ಕೋಟಿ ರೂಪಾಯಿಗಳು ಕುಡಿಯುವ ನೀರಿಗಾಗಲೀ, ಅಲ್ಲಿ ಪೈಪ್ಡ್ ವಾಟರ್ ಸಪ್ಲೈಗಾಗಲೀ ಬೋರ್‌ವೆಲ್ ತೆಗೆಯುವುದಕ್ಕಾಗಲೀ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಲೀ ಬೇರೆ ಬೇರೆ ಕಾರಣಕ್ಕೋಸ್ಕರ ಯಾವುದೇ ಪ್ರಾಮಾಣಿಕವಾದ ಪ್ರಯತ್ನಗಳೂ

ಆಗಿಲ್ಲ. ನಾನು ನಿಮಗೆ ಒತ್ತಾಯ ಮಾಡುತ್ತಿರುವುದು ಏನು? ಇವತ್ತು ನೀವು ಎಷ್ಟು ಹಣವನ್ನು ಕೊಡುತ್ತೀರಿ, ಅದನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಉಳಿದ ಪ್ರತಿನಿಧಿಗಳ ಸಮಿತಿಯ ಅಧಿಕಾರಿಗಳ ಸಮಕ್ಷಮ ತತ್‌ಕ್ಷಣ, ಉದಾಹರಣೆಗೆ ಗ್ರಾಮಪಂಚಾಯಿತಿಯ ಚುನಾವಣೆ ಬರುತ್ತಿದೆ, ಅಧ್ಯಕ್ಷರ ಚುನಾವಣೆಯಾಗುವವರೆಗೂ ಫೆಬ್ರವರಿ–ಮಾರ್ಚ್ ಕೊನೆಯವರೆಗೂ ಎಳೆದುಕೊಂಡು ಹೋಗುತ್ತದೆ. ಇನ್ನು ಎರಡೂವರೆ ತಿಂಗಳುಗಳ ಕಾಲ ಇದರ ಬಗ್ಗೆ, ಈ ರಾಜ್ಯದ ಜನರ ಸಂಕಷ್ಟಗಳನ್ನು ಕೇಳುವವರು ಯಾರು? ಅದಕ್ಕಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಅದರ ಬಗ್ಗೆ ಏನೇನು ಹಣವಿದೆ ಅದನ್ನು ಕುಸಲಿ ಮಾಡಿ ಕಾನೂನಿನ ಚೌಕಟ್ಟಿನೊಳಗಡೆ ಯಾವ ರೀತಿಯಾಗಿ ಅದನ್ನು ತ್ವರಿತಗತಿಯಲ್ಲಿ ಮಾಡಬೇಕು ಅದರ ಬಗ್ಗೆ ವಿಶೇಷವಾದಂತಹ ರೀತಿಯಲ್ಲಿ ನೀವು ಉತ್ತರವನ್ನು ಕೊಟ್ಟರೆ ನಾವು ರಾಜ್ಯಪಾಲರ ಭಾಷಣವನ್ನು ಪ್ರಾರಂಭ ಮಾಡಬಹುದು. ನಾವು ಎಲ್ಲಿಯವರೆಗೆ ವಿನಂತಿಯನ್ನು ಮಾಡುತ್ತೇವೆಂದರೆ, ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತುಕೊಂಡು ಎರಡು ಸಾಲುಗಳಲ್ಲಿ ಇದನ್ನು ಮಾಡುತ್ತೇವೆ, ಇದನ್ನು ನಾವೆಲ್ಲರೂ ಒಟ್ಟಾಗಿ ಮಾಡೋಣ, ಆ ಕಡೆ ಶಾಸಕರು ಮತ್ತು ಈ ಕಡೆ ಶಾಸಕರು ಎಂದು ಬೇರೆ ಏನೂ ವ್ಯತ್ಯಾಸವಿಲ್ಲ ಇದರಲ್ಲಿ ಪ್ರೆಸ್ಟೀಜ್ ಪ್ರಶ್ನೆಯೇ ಇಲ್ಲ. ಒಟ್ಟಾಗಿ ರಾಜ್ಯದ ಹಿತದೃಷ್ಟಿಯ ಬಗ್ಗೆ ಯೋಚನೆಯನ್ನು ಮಾಡಬೇಕು. ನೀವೇ ಎದ್ದು ನಿಂತುಕೊಂಡು ಎರಡು ಸಾಲಿನಲ್ಲಿ ಉತ್ತರವನ್ನು ಕೊಟ್ಟರೆ ನಮಗೆಲ್ಲರಿಗೂ ಸಮಾಧಾನವಾಗುತ್ತದೆ. ನಾವು ಮುಂದೆ ರಾಜ್ಯಪಾಲರ ಭಾಷಣದ ವಂದನಾರ್ನಿಣಯಕ್ಕೆ ಅನುವು ಮಾಡಿಕೊಡಬಹುದು.

ಶ್ರಿ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾವು ಬಹಳ ಉತ್ತರವನ್ನು ನಿರೀಕ್ಷೆ ಮಾಡಲಿಲ್ಲ, ಎಲ್ಲರಿಗೂ ಕುಡಿಯುವ ನೀರಿನ ಬಗ್ಗೆ ತೊಂದರೆ ಇದೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಕೊಡಬೇಕಾದರೆ ಹೇಳುತ್ತಾರೆಂದು ಭಾವಿಸಿದ್ದೆವು. ಆಕಸ್ಮಾತಾಗಿ ಈ ಸ್ಥಿತಿಯೂ ನಿರ್ಮಾಣವಾಯಿತು. ಈಗಲೂ ಇದನ್ನು ಬಹಳ ಉದ್ದಕ್ಕೆ ಎಳೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲವೆಂದು ಹೇಳುತ್ತೇನೆ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಾವಳಿ ಕೆಳಗಡೆ ಮಾಡಿ, ನಾವು ಹೇಳಿದ ಕಡೆ ಕೊಡಿಸಿ ಎಂದು ಯಾರೋ ಕೇಳಿದರು ಅಂತ ಅಲ್ಲ. ಗ್ರಾಂಟ್ ಎಷ್ಟು ಕೊಡುತ್ತೀರಿ, ಅದಕ್ಕೆ ಅಗತ್ಯವೆಷ್ಟು ಇದೆ, ಆ ನಿಯಮಾವಳಿ ಕೆಳಗಡೆ ಬೇಕೋ ಅಥವಾ ಬೇಡವೋ ಎಂದು ಸಣ್ಣ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಶಾಸಕರಿಗೆ ಅಧಿಕಾರ ಕೊಟ್ಟರೆ ನೀವು ಏನಾದರೂ ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಬೇಕು. ಬರ ಪರಿಹಾರ ಅಥವಾ ಬೇಸಿಗೆಯಲ್ಲಾದರೂ ಕುಡಿಯುವ ನೀರಿಗೆ ನಾವು ಉತ್ತರ ಹೇಳುವ ಸ್ಥಿತಿಗೆ ಸಮರ್ಥರಾಗಬೇಕು, ಆ ಸ್ಥಿತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಅದಕ್ಕೆ ಕಾನೂನಿನ ತೊಡಕು ಆಗಿದ್ದರೆ ಒಂದು ಸ್ಟೇಟ್ ಆಕ್ಟ್ ಇದು, ಸಂವಿಧಾನ ಅಲ್ಲ ತಮಗೆ ಬೇಕಾದರೆ ಸಾಯಂಕಾಲದೊಳಗಾಗಿ ಬಿಲ್‌ನ್ನು ಇಟ್ಟು ಆ ಪ್ರಾವಿಜನ್‌ನ್ನು ರಿಪೀಲ್ ಮಾಡಿ. ಇದರಿಂದ ನಮಗೇನೂ ತೊಂದರೆ ಇಲ್ಲ. ಅಥವಾ ಅದನ್ನು ಸ್ಥಗಿತ ಮಾಡಬಹುದು. ಅದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಸದ್ಯಕ್ಕೆ ಈಗ ಶಾಸಕರಿಗೆ ಸ್ವಲ್ಪ ಗೌರವ ಬರುವ ಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಇದನ್ನು ಪ್ರತಿಷ್ಟೆ ಪ್ರಶ್ನೆಯನ್ನು ಮಾಡಿಕೊಳ್ಳುವುದು ಬೇಡ. ಇದು ಪಕ್ಷಾತೀತವಾದಂತಹ ಬೇಡಿಕೆಯಾಗಿದೆ. ಬಹುಶಃ ಅವರು ಮಾತನಾಡದೇ ಇರಬಹುದು, ನಾವು ಮಾತನಾಡಿದ್ದೇವೆ, ಇದು ಎಲ್ಲಾ ಶಾಸಕರಿಗೂ ಬೇಕಾದಂತಹ ಪ್ರಶ್ನೆಯಾಗಿದೆ. ಆದ್ದರಿಂದ ಎಲ್ಲಾ ಶಾಸಕರುಗಳಿಗೂ ಇದರ ಬಗ್ಗೆ ಅನುಭವವಾಗಿದೆ. ಆದರೆಈಗ ಶಾಸಕರ ಪ್ರಶ್ನೆ ಏನು? ಆ ಕ್ಷೇತ್ರದ ಶಾಸಕರ ಅವರ ವ್ಯಕ್ತಿತ್ವ ಇದರ ಬಗ್ಗೆ ಸಂಪೂರ್ಣವಾಗಿ ಎಲ್ಲಾ ಶಾಸಕರುಗಳಿಗೂ ಗೊತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ತಾವು ಕ್ಷೇತ್ರವಾರು ಅಧ್ಯಕ್ಷತೆಯನ್ನು ಶಾಸಕರ ಕೈಯಲ್ಲಿ ಮಾಡಬೇಕು. ಈಗ ಎಷ್ಟು ಹಣವನ್ನು ಕೊಡಬೇಕೆಂಬ ಬಗ್ಗೆ ತೀರ್ಮಾನ ಮಾಡಿದ್ದೀರಿ, ಅದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಇದರಲ್ಲಿ ಪ್ರತಿಷ್ಟೆ ಏನೂ ಇಟ್ಟು ಕೊಳ್ಳಬೇಡಿ. ನಾವು ಮೊದಲಿನಿಂದಲೂ ಇಂತಹ ವಿಚಾರಗಳು ಬಂದಾಗ ಬಹಳ ಪ್ರಾಮಾಣಿಕವಾಗಿ ನಿಮ್ಮ ಜೊತೆಯಲ್ಲಿ ಸಹಕಾರವನ್ನು ನೀಡಿದ್ದೇವೆ. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಹೇಳಬೇಕೆಂದು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ನೀವು ಹಣವನ್ನು ಕೊಡದೆಯೇ ಅಧ್ಯಕ್ಷರನ್ನಾಗಿ ಮಾಡುವುದರಲ್ಲಿ ಅರ್ಥವೇ ಇರುವುದಿಲ್ಲ. ಹಣವನ್ನು ಕೊಟ್ಟು ಅಧ್ಯಕ್ಷರನ್ನಾಗಿ ಮಾಡುವುದು ಮೊದಲನೆಯದು. ಇನ್ನು ಎರಡನೆಯದು ಆ ಆಕ್ಟನ್ನು ಸ್ವಲ್ಪ ತಿದ್ದುಪಡಿ ಮಾಡುವ ಬಗ್ಗೆ ಅವಕಾಶವನ್ನು ಮಾಡಿಕೊಡಿ. ಏಕೆಂದರೆ ಪ್ರತಿ ಸಂದರ್ಭದಲ್ಲಿಯೂ ಇದೇ ರೀತಿಯಾದಂತಹ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ಅದರ ಬಗ್ಗೆ ನಿಯಮಾವಳಿಯಲ್ಲಿ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರವು ಮುಜುಗರಕ್ಕೆ ಈಡಾಗಬೇಕಾಗುತ್ತದೆ. ಹಾಗಾಗಿ ನನ್ನ ಕ್ಷೇತ್ರದಲ್ಲಿ 3 ತಾಲ್ಲೂಕುಗಳು ಬರುತ್ತವೆ, ನೀವು ಕ್ಷೇತ್ರಾವಾರು ಮಾಡಿದಾಗ ನಾನು ಏನು ಮಾಡಬೇಕು? ಅದಕ್ಕಾಗಿ ಮೂರು ತಾಲ್ಲೂಕಿಗೂ ಒಂದೊಂದರಂತೆ ಕ್ಷೇತ್ರವಾರು ಮಾಡಿದರೆ ಒಳ್ಳೆಯದು ಎಂದು ನನ್ನ ಭಾವನೆಯಾಗಿದೆ.

ಶ್ರೀ ಎಸ್. ರಾಜೇಂದ್ರನ್(ಕೆಜಿಎಫ್): ಸನ್ಮಾನ್ಯ ಸಭಾಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಸಿಟಿಯ ಕಡೆ ತಾವು ಸ್ವಲ್ಪ ಚಿಂತನೆಯನ್ನು ಮಾಡಬೇಕು. ನನ್ನ ತಾಲ್ಲೂಕಿನಲ್ಲಿ ಏನಾಗುತ್ತದೆಂದರೆ ಕುಡಿಯುವ ನೀರಿನ ಬಗ್ಗೆ ಜಿಲ್ಲಾ ಪಂಚಾಯಿತಿ ಆಫೀಸರ್ ಹತ್ತಿರ ಹೋಗಿ ನೋಡಬೇಕು, ಸಿ.ಇ.ಓ ಹತ್ತಿರ ನೋಡಬೇಕು ಎಂದು ಹೇಳುತ್ತಾರೆ. ಡೆಪ್ಯುಟಿ ಕಮೀಷನರ್‌ರವರು ಇದ್ದಾರೆ.
HE is directly attached to the KGF city. There is a separate Water Board. ಅದರ ಮೇಲೆ ಕ್ರಮವನ್ನು ತೆಗೆದುಕೊಂಡು Kindly take care. There is heavy shortage of water in KGF. ಕುಡಿಯುವ ನೀರಿನ ಬಗ್ಗೆ ಉತ್ತರವನ್ನು ಕೊಡುವಂತಹ ಸಮಯದಲ್ಲಿ ಕೆಜಿಎಫ್ ಸಿಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರುಗಳು ಹಾಗೂ ವಿರೋಧಪಕ್ಷದ ನಾಯಕರು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ತಮ್ಮ ಕೊಠಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಕೆಲವು ವಿಚಾರಗಳ ಬಗ್ಗೆ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ತಾವು ಅದೊಂದು ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿ ಮಿಕ್ಕ ವಿಚಾರಗಳನ್ನು ಹೇಳುವುದು ಬೇಡವೆನ್ನುವಂತಹ ರೀತಿಯಲ್ಲಿ ಇಲ್ಲಿ ಪ್ರಸ್ತಾಪವಾಯಿತು. ಅದರ ಬಗ್ಗೆ ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ನಾವು ಕೂಡ ಹೇಳುತ್ತೇವೆ. ಆದರೆ ಚರ್ಚೆ ಬಂದಂತಹ ಸಂದರ್ಭದಿಂದ ಹಿಡಿದು ಇಲ್ಲಿಯವರೆವಿಗೂ ಕೂಡ ಕುಡಿಯುವ ನೀರಿನ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ. ಎನ್ನುವಂತಹ ರೀತಿಯಲ್ಲಿ ಪತ್ರಿಕೆಗಳಲ್ಲಿ ಭಾಷಣವಾಗಿರುವ ಬಗ್ಗೆ ಬಂದಿದೆ. ಆದ್ದರಿಂದ ನಾವೆಲ್ಲರೂ ಏನು ಕೆಲಸ ಮಾಡಿದ್ದೇವೆ ಎನ್ನುವುದರ ಬಗ್ಗೆ ಸರ್ಕಾರ ಉತ್ತರವನ್ನು ಕೊಡಲೇಬೇಕಾಗುತ್ತದೆ. ನಾವು ಕೇವಲ ಎರಡು ಸೆಂಟೆನ್ಸ್ ನ್ನು ಹೇಳಿದರೆ ನಾವು ಒಪ್ಪಿಕೊಂಡಿದ್ದೇವೆಂದರೆ ಹಿಂದೆ ಆಗಿರುವಂತಹ ಈ ಚರ್ಚೆ ಪತ್ರಿಕೆಗಳಲ್ಲಿ ವರದಿಯಾಗಿರುವುದರಿಂದ ಈ ಸಮಿಶ್ರ ಸರ್ಕಾರ ಇದರ ಬಗ್ಗೆ ಏನೆಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ, ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಎನ್ನುವುದನ್ನು ನಾವು ಜನತೆಗೆ ತಿಳಿಸಬೇಕಾಗಿರುವುದರಿಂದ ನಾವು ಎಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪವನ್ನು ಮಾಡಬೇಕಾಗುತ್ತದೆ. ಅದನ್ನು ಪ್ರಸ್ತಾಪ ಮಾಡಿದ ಮೇಲೆ ತಾವು ಏನು ಸಹಕಾರವನ್ನು ಕೊಟ್ಟು ತಮ್ಮ ಕೊಠಡಿಯಲ್ಲಿ ಏನು ನಿರ್ಣಯವಾಗಿದೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳಾದ ಸತ್ಯನಾರಾಯಣರವರ ಮಾತು ಅರ್ಧದಲ್ಲಿಯೇ ಮುಕ್ತಾಯವಾಯಿತು. ಅದು ಅರ್ಧದಲ್ಲಿಯೇ ನಿಂತಿರುವುದರಿಂದ ಅವರು ಮಾತನ್ನು ಮುಂದುವರಿಸಲಿ, ಅದಾದನಂತರ ಬರಗಾಲಕ್ಕೆ ಸಂಬಂಧಪಡುವಂತಹ ಕುಡಿಯುವ ನೀರಿನ ವಿಚಾರದಲ್ಲಿ ನಾವು ಏನು ಕ್ರಮವನ್ನು ಕೈಗೊಂಡಿದ್ದೇವೆ: ಅದರ ಬಗ್ಗೆ ಹೇಳುತ್ತೇವೆ. ಅದಕ್ಕಾಗಿ ತಾವು ದಯವಿಟ್ಟು ಸಹಕಾರವನ್ನು ಕೊಡಬೇಕು, ಏಕೆಂದರೆ ನೀವು ಹೇಳಿದ ಎಲ್ಲಾ ವಿಚಾರಗಳು ರಿಪೋರ್ಟ್ ಆಗಿ, ನಾವು ಯಾವುದರ ಬಗ್ಗೆಯೂ ಸರ್ಕಾರದ ಪರವಾಗಿ ಏನು ಕೆಲಸ ಮಾಡಿದ್ದೇವೆನ್ನುವುದರ ಬಗ್ಗೆ ವರದಿ ಬರದೇ ಇದ್ದರೆ, ಅದು ತಪ್ಪು ಅಭಿಪ್ರಾಯಕ್ಕೆ ಎಡೆಮಾಡಿಕೊಡುತ್ತದೆ. ಆದ್ದರಿಂದ ತಾವು ಅವರಿಗೆ ದಯವಿಟ್ಟು ಅವಕಾಶವನ್ನು ಕಲ್ಪಿಸಿಕೊಡಬೇಕು. ಅವರ ಉತ್ತರವನ್ನು ಕೊಟ್ಟ ನಂತರ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಸಿದ್ದು ಕೆ. ಸವದಿ: ಸನ್ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು: ಮಾನ್ಯ ಸವದಿಯವರೆ, ತಾವು ದಯಮಾಡಿ ಕುಳಿತುಕೊಳ್ಳಿ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ಅನಂತರ ತಾವು ಮಾತನಾಡಬಹುದು. ಏನಾದರೂ ಹೇಳುವುದಿದ್ದರೆ ಅನಂತರ ಹೇಳಬೇಕು.

ಶ್ರೀ ಸಿದ್ದು ಕೆ. ಸವದಿ: ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಬೋರ್ ಬಂದ್ ಆಗಿ 6–7 ತಿಂಗಳುಗಳಾಗಿದೆ. ರಿಪೇರಿ ಮಾಡಿದ್ದೇವೆಂದು ಅವರು ಹೇಳುತ್ತಾರೆ, ಇದರ ಬಗ್ಗೆ ಅವರು ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದಾರೆಂದು ಹೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಅದನ್ನು ಕ್ಷೇತ್ರವಾರು ಮಾಡತಕ್ಕದ್ದು ಅಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಕೊಡಲಿ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಸತ್ಯನಾರಾಯಣ(ಗ್ರಾಮೀಣ ನೀರು ಪೂರೈಕೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ ಹಣದ ಕೊರತೆ ಇಲ್ಲವೆಂದು ಆಗಲೇ ಹೇಳಿದ್ದೇನೆ. ಈಗಾಗಲೇ ಜಿಲ್ಲಾ ಪಂಚಾಯಿತಿಯಲ್ಲಿ ಸುಮಾರು 51.38 ಕೋಟಿ ರೂಪಾಯಿಗಳು ಹಣ ಇದೆ.

ಈಗ ಮೊನ್ನೆ ದಿನಾಂಕ: 25ನೇ ತಾರೀಖು 27.60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬರ ಪರಿಹಾರ ನಿಧಿಯಲ್ಲಿ ಕಂದಾಯ ಸಚಿವರು ಹೇಳುತ್ತಾರೆ ಮತ್ತು ನಾವು ಕೇಂದ್ರ ಸರ್ಕಾರಕ್ಕೆ ಮೊನ್ನೆ ರಘುವಂಶಪ್ರಸಾದ್‌ಸಿಂಗ್‌ರವರು, ಹಾನರಬಲ್ ಯೂನಿಯನ್ ಮಿನಿಸ್ಟರ್ ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ ನಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆಯಲ್ಲಿ ಚರ್ಚೆ ಮಾಡಿ ಅನೇಕ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. 150 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಬೇಕೆಂದು ನಾವು ಕೇಳಿದ್ದೇವೆ. ಹಾಗಾಗಿ ಹಣದ ಕೊರತೆ ಬರುವುದಿಲ್ಲ. ಇನ್ನು Additional aids to zilla panchayat ಎನ್ನುವ ಒಂದು ಹೆಡ್ ಇದೆ. ಅದರಲ್ಲಿ ನಮ್ಮ ರಾಜ್ಯದ ಉಪಮುಖ್ಯಮಂತ್ರಿಗಳು, ಮಾನ್ಯ ಹಣಕಾಸು ಮಂತ್ರಿಗಳನ್ನು 6.17 ಕೋಟಿ ರೂ ಹಣ ಕೇಳಿದ್ದೇನೆ. ಹೀಗಾಗಿ ಇರತಕ್ಕಂಥ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಸಂದರ್ಭಕ್ಕೆ ಅನುಗುಣವಾಗಿ ಉಪಯೋಗಿಸುವುದಕ್ಕೆ ಹಣದ ಕೊರತೆ ಇಲ್ಲ. ಆದರೆ ಅದನ್ನು ಕಾರ್ಯಗತ ಮಾಡತಕ್ಕಂಥ ವಿಷಯದಲ್ಲಿ ನಾವು ಏನು ಇವತ್ತು ಎಲ್ಲರೂ ಚರ್ಚೆ ಮಾಡಿದ್ದೇವೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ಹೀಗಾಗಿ ಇಷ್ಟು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಮಂತ್ರಿ):– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮಗೆ ಗೊತ್ತಿದ್ದಂಥ ರೀತಿಯಲ್ಲಿ ಇದು ಯಾರೇ ನಿರ್ಮಾಣ ಮಾಡಿದಂಥಾದ್ದು ಅಲ್ಲ. ಅದು ಪ್ರಕೃತಿ ವಿಕೋಪದಿಂದ ಕಳೆದ ಮೂರು–ನಾಲ್ಕು ವರ್ಷಗಳಿಂದ ಮಳೆಯ ಅಭಾವದ ಕಾರಣಕ್ಕಾಗಿ ಇಂತಹ ಒಂದು ಉಲ್ಬಣವಾದಂಥ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಯಾರು ಜವಾಬ್ದಾರರು ಅಲ್ಲ. ಪ್ರಾಯಶಃ ಪ್ರಕೃತಿ ಅಥವಾ ದೇವರು, ಯಾರನ್ನು ನಾವು ಭಾವಿಸಿಕೊಳ್ಳಬಹುದೋ? ಅವರು ಕಾರಣ ಎಂದು ಹೇಳಿ ನಾವು ಅಂದುಕೊಂಡು 750 ಮಿಲಿಮೀಟರ್‌ಗಿಂತ ಕಡಿಮೆ ಇರತಕ್ಕಂಥ ಪ್ರದೇಶಗಳು ಈ ಮಳೆ ಬೀಳತಕ್ಕಂಥಾದ್ದು ಆಗಿರುವುದರಿಂದ ಸುಮಾರು 27 ಜಿಲ್ಲೆಗಳಲ್ಲಿ 18 ಜಿಲ್ಲೆಗಳಲ್ಲಿ ವಾರ್ಷಿಕ ಪ್ರಮಾಣದ ಮಳೆ ಬಹಳ ಕಡಿಮೆ ಆಗಿತ್ತು. ಮೇಲ್ನೋಟಕ್ಕೆ ನಮಗೆ ಏನು ಅನ್ನಿಸುತ್ತದೆ? ಈ ಸಲ ಮಳೆ ಚೆನ್ನಾಗಿ ಬಂದಿದೆ ಎಂದು ಭಾವಿಸಿಕೊಳ್ಳುತ್ತೇವೆ. ಅಲ್ಲಿ ಇಲ್ಲಿ ಹಸಿರು ಕಂಡಿರತಕ್ಕಂಥಾದ್ದನ್ನು ನೋಡುತ್ತೇವೆ. ಆದರೆ ಅದು ಬೆಳೆಗೆ ಮಾತ್ರ ಸಾಕಾದಷ್ಟು ಮಳೆ ಬಂದಿದೆ ವಿನಹ ಸುಮಾರು 18 ಜಿಲ್ಲೆಗಳಲ್ಲಿ 750 ಮಿಲಿ ಮೀಟರ್‌ಗಿಂತಲೂ ಕಡಿಮೆ ಮಳೆ ಬಂದಿರತಕ್ಕಂಥ ಒಂದು ವಿಶೇಷವಾಗಿರತಕ್ಕಂಥ ಉಲ್ಬಣದ ಪರಿಸ್ಥಿತಿ ಇಂದು ಕರ್ನಾಟಕದಲ್ಲಿ ಸೃಷ್ಟಿಯಾಗಿದೆ. ಇದರ ಜತೆಗೆ ಕೆಲವು ಜಿಲ್ಲೆಗಳಲ್ಲಿ ಪ್ರವಾಹ ಕೂಡ ಉಂಟಾಗಿದೆ. ನಾವು ಅಲ್ಲಿ ಒಂದು ವೈರುಧ್ಯವನ್ನು ಕಂಡಿದ್ದೇವೆ. ಒಂದು ಕಡೆಗೆ ಪ್ರವಾಹ ಪೀಡಿತ ಪ್ರದೇಶಗಳಿಗೆ ನೀವು ಹಣವನ್ನು ಕೊಡಿ ಎಂದು ಕೇಂದ್ರಸರ್ಕಾರಕ್ಕೆ ಮನವಿಯನ್ನು ಕೊಟ್ಟೆವು. ಮತ್ತೊಂದು ಕಡೆಗೆ 1147 ಕೋಟಿ ರೂಪಾಯಿಗಳನ್ನು ಈ ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ಹಣ ಕೊಡಬೇಕು, ನಾಲ್ಕೂವರೆ ಲಕ್ಷ ಟನ್ ಆಹಾರ ಧಾನ್ಯವನ್ನು ಹೆಚ್ಚುವರಿಯಾಗಿ ತಾವು ಕೊಡಬೇಕೆಂದು ಕೇಳಿದ್ದೆವು. ಅದಕ್ಕೆ ಕಾರಣ ಆಗಿರತಕ್ಕಂಥಾದ್ದು ಕೆಲವು ಜಿಲ್ಲೆಗಳಲ್ಲಿ ಅದರಲ್ಲೂ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಚಿಕ್ಕಮಗಳೂರಿನ ಭಾಗ.....

ಶ್ರೀ ಗೋವಿಂದ ಎಂ ಕಾರಜೋಳ:– ಸನ್ಮಾನ್ಯ ಅಧ್ಯಕ್ಷರೆ, ಸ್ಕೇರ್‌ಸಿಟಿ ಡಿಕ್ಲರೇಶನ್ ಮಾಡಿದ್ದರಲ್ಲಿ ಎಷ್ಟೊಂದು ಅವೈಜ್ಞಾನಿಕವಾಗಿದೆ ಎಂದರೆ ಬಾಗಲಕೋಟೆ ಜಿಲ್ಲೆಯಲ್ಲಿ ಆರು

ತಾಲ್ಲೂಕುಗಳಲ್ಲಿ ಐದು ತಾಲ್ಲೂಕುಗಳನ್ನು ಈಗಾಗಲೇ ಸ್ಕೇರ್‌ಸಿಟಿ ಅಂತ ಡಿಕ್ಲೇರ್ ಮಾಡಿದ್ದಾರೆ. ಆದರೆ ನನ್ನ ಮತಕ್ಷೇತ್ರದ ಮುಧೋಳ ತಾಲ್ಲೂಕನ್ನು ಡಿಕ್ಲೇರ್ ಮಾಡಿಲ್ಲ. ಬಿಜಾಪುರದಲ್ಲಿ ಐದೂ ತಾಲ್ಲೂಕುಗಳನ್ನು ಸ್ಕೇರ್‌ಸಿಟಿ ಅಂತ ಡಿಕ್ಲೇರ್ ಮಾಡಿದ್ದಾರೆ. ನಾನು ಕೇಳಿದರೆ ಅಧಿಕಾರಿಗಳು ನಿಮ್ಮ ತಾಲ್ಲೂಕಿನಲ್ಲಿ ನೀರಾವರಿ ಇದೆಯೆಂದು ಉತ್ತರ ಕೊಡುತ್ತಾರೆ. ನಮ್ಮಲ್ಲಿ ನೂರು ಪರ್ಸೆಂಟ್ ನೀರಾವರಿ ಇಲ್ಲ. ಕೇವಲ ಐವತ್ತು ಪರ್ಸೆಂಟ್ ಮಾತ್ರ ನೀರಾವರಿ ಇದೆ. ಐವತ್ತು ಪರ್ಸೆಂಟ್ ಬಹಳ ಭೀಕರವಾದಂಥ ಬರಗಾಲ ಇದೆ. ಕುಡಿಯುವ ನೀರಿಲ್ಲ, ಜನರಿಗೆ ಉದ್ಯೋಗ ಇಲ್ಲ, ದನಕರುಗಳು ಒಂದೂ ಉಳಿದಲ್ಲ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮುಧೋಳ ತಾಲ್ಲೂಕನ್ನು ಬರಗಾಲ ತಾಲ್ಲೂಕೆಂದು ಈ ಸದನದಲ್ಲಿ ಅವರು ಹೇಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:– ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಯಲ್ಲಿ ಅನೇಕ ಕಡೆಗೆ ನೀರಾವರಿ ಪ್ರದೇಶ ಇದ್ದರೂ ಕೂಡ ಕೆಲವು ವೈಜ್ಞಾನಿಕವಾದಂಥ ಅಂಶಗಳನ್ನು ಪರಿಗಣಿಸಿದ್ದಾರೆ. ಹಿಂದೆ ಆಣೆವಾರು ಪದ್ಧತಿ ಮೇಲೆ ಬರಗಾಲವನ್ನು ಘೋಷಣೆ ಮಾಡತಕ್ಕಂಥ ಪದ್ಧತಿ ಇತ್ತು. ಆದರೆ ಬರಗಾಲ ಘೋಷಣೆಗೆ ಸಂಬಂಧಪಡುವ ರೀತಿಯಲ್ಲಿ ನಾವು ಇಸ್ರೋ ಕಡೆಯಿಂದ ವರದಿಯನ್ನು ತರಿಸಿಕೊಳ್ಳತಕ್ಕಂಥಾದ್ದರಲ್ಲಿ, ಮಳೆ ಬಿದ್ದ ದಿವಸಕ್ಕೂ ಮತ್ತೆ ನಡುವೆ ಮಳೆ ಬೀಳದೇ ಇರತಕ್ಕಂಥ ದಿವಸದಲ್ಲಿ ಇರತಕ್ಕಂಥ ಒಣಹವೆಯ ದಿನಮಾನಗಳು ಮತ್ತು ಹವಮಾನದಲ್ಲಿ ಒಣಹವೆ ಇರತಕ್ಕಂಥ ವಿಚಾರಗಳು, ಮೂರನೆಯದು ವಾಡಿಕೆ ಮಳೆಗಿಂತ ಕಡಿಮೆ ಬಂದಿರತಕ್ಕಂಥಾದ್ದರ ವಿಚಾರ, ಎಷ್ಟು ಎಕರೆ ಪ್ರದೇಶಗಳಲ್ಲಿ ನೀರಾವರಿ ಇದೆ, ಉಳಿದಿರತಕ್ಕಂಥಾದ್ದು ಯಾವುದಿದೆ ಮತ್ತು ಆಣೆವಾರು ಪದ್ಧತಿಯಲ್ಲಿ ಬೆಳೆ ವಿಚಾರದಲ್ಲಿ ನಮ್ಮ ಕೃಷಿ ಇಲಾಖೆಯವರು ಕೊಟ್ಟಿರತಕ್ಕಂಥ ವರದಿ ಇವೆಲ್ಲವನ್ನೂ ಕೂಡಿಸಿ ಒಂದು ಬರಗಾಲ ಅಂತ ಹೇಳಿ ಅಲ್ಲಿ ಘೋಷಣೆ ಮಾಡತಕ್ಕಂಥಾದ್ದು ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ. ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಾವು ಅವರಿಗೆ ಕೊಟ್ಟಿರತಕ್ಕಂಥ ವರದಿಯಲ್ಲಿ ಈಗ ಇರತಕ್ಕಂಥ ಎಂಬತ್ತು ತಾಲ್ಲೂಕುಗಳು ಅಲ್ಲದೆ ಬೇರೆ ತಾಲ್ಲೂಕುಗಳೂ ಕೂಡ ಮುಂಬರುವ ದಿನಮಾನಗಳಲ್ಲಿ ಬರಗಾಲಕ್ಕೆ ತುತ್ತಾಗುವಂಥ ಎನ್ನತಕ್ಕಂಥಾದ್ದನ್ನು ಕೂಡ ವರದಿಯಲ್ಲಿ ಕಾಣಿಸಿದ್ದೇವೆ. ಇವತ್ತು ಇದ್ದಂತ ಬರಗಾಲ ಪರಿಸ್ಥಿತಿ ನಾಳೆ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಇದರ ಜತೆಗೆ ತಾವು ಹೇಳಿದಂಥ ರೀತಿಯಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಕೂಡ ಇವತ್ತು ತೆಗೆಸಿರತಕ್ಕಂಥ ಕೊಳವೆ ಬಾವಿ ನಾಳೇನೇ ಬತ್ತಿ ಹೋಗತಕ್ಕಂಥ ಸಂಭವ ಇದೆ. ಅಂತರ್‌ಜಲ ಇನ್ನೂ ಕಡಿಮೆಯಾಗತಕ್ಕಂಥ ಸಂಬವ ಇದೆ. ಮುಂದಿನ ದಿನಮಾನಗಳಲ್ಲಿ ಅದು ಹೆಚ್ಚು ಆಗತಕ್ಕಂಥಾದ್ದು ಇದೆಯೇ ವಿನಹ ಕಡಿಮೆ ಆಗತಕ್ಕಂಥಾದ್ದು ಇಲ್ಲ. ಆ ಕಾರಣಕ್ಕೆ ಎಂಬತ್ತು ತಾಲ್ಲೂಕುಗಳು ಅಂತ ತಾವು ಅಂದುಕೊಳ್ಳಬೇಕಾದದ್ದು ಇಲ್ಲ. ತಾವು ಹೇಳಿದ್ದೀರಿ. ಆದರೆ ಅದು ಕಾರಜೋಳರವರ ಕ್ಷೇತ್ರ ಅಂತ ಬಿಟ್ಟಿದ್ದಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈಗ ತಿಪಟೂರು ಡಿಕ್ಲೇರ್ ಮಾಡುತ್ತೀರಿ, ಶಿರಾ ಡಿಕ್ಲೇರ್ ಮಾಡುತ್ತೀರಿ. ಆದರೆ ಮಧ್ಯದಲ್ಲಿ ಚಿಕ್ಕನಾಯಕನಹಳ್ಳಿಯನ್ನು ಬಿಡುತ್ತೀರಿ. ತಪ್ಪು ತಿಳಿದುಕೊಳ್ಳಬೇಡಿ. ತಿಪಟೂರಿನ ಒಂದು ಭಾಗಕ್ಕೆ ನಾನು ಶಾಸಕನೇ ಆಗಿದ್ದೇನೆ.

ನಿಮಗೆ ರೇನ್‌ಫಾಲ್ ರಿಪೋರ್ಟನ್ನು ನಾವು ತಂದುಕೊಟ್ಟಿದ್ದೇವೆ, ಅಂಡರ್‌ಗ್ರೌಂಡ್ ವಾಟರ್‌ಲೆವೆಲ್ ರಿಪೋರ್ಟನ್ನು ನಾವು ತಂದು ಕೊಟ್ಟಿದ್ದೇವೆ. ಸ್ಟ್ಯಾಟಿಕ್ ವಾಟರ್ ಲೆವಲದ್ದು ಕೊಟ್ಟಿದ್ದೇವೆ, ಗ್ಯಾಪ್ ಏನು ತೆಗೆದುಕೊಳ್ಳುತ್ತಿದೆ, ಮೂರು ಮೀಟರ್ ಇರಬೇಕಾದರೆ ಅದು 28 ಚಿಲ್ಲರೆ ಮೀಟರ್‌ಗೆ ಹೋಗಿದೆ. ಅದನ್ನೂ ಕೂಡ ಕೊಟ್ಟಿದ್ದೇವೆ. ಅಲ್ಲಿ ಇರುವ ಕ್ರಾಪ್ ಕಟ್ಟಿಂಗ್ ಎಕ್ಸಪರಿಮೆಂಟಲ್ ಆಗಿರುವ ಪರಿಸ್ಥಿತಿಯ ವರದಿಯನ್ನು ತಂದುಕೊಟ್ಟಿದ್ದೇವೆ. ಆದರೆ ಡಿಕ್ಲೇರ್ ಮಾಡಬೇಕಾದರೆ ಎಲ್ಲೋ ಒಂದು ಕಡೆ ತಪ್ಪಾಗಿದೆ ಎನ್ನತಕ್ಕಂಥಾದ್ದು ತಾವು ದಯಮಾಡಿ ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿ ಎರಡು ಮಾತೇ ಇಲ್ಲ. ಯಾವುದೋ ಅಧಿಕಾರಿ ಕೋಟ್ಟ ವರದಿಗೆ ನಮ್ಮನ್ನೆಲ್ಲಾ ಬಲಿಪಶು ಮಾಡುವುದು, ನಮ್ಮ ಕ್ಷೇತ್ರದ ಜನತೆಗೆ ತೊಂದರೆ ಕೊಡುವುದನ್ನು ತಾವು ಜಸ್ಟಿಫೈ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ಚಿಕ್ಕನಾಯಕನಹಳ್ಳಿಯ ಮೇಲೆಯೇ ಮಳೆ ಮೋಡ ಹೋಗಬೇಕು. ತಿಪಟೂರು–ಶಿರಾ ಮಧ್ಯೆ ಇರುವುದು ಚಿಕ್ಕನಾಯಕನ ಹಳ್ಳಿ. ಅದರ ಪಕ್ಕದ್ದೇ ಮಧುಗಿರಿ. ಚಿಕ್ಕನಾಯಕನಹಳ್ಳಿಗಿಂತ ಯಾವುದೇ ಕಾರಣಕ್ಕೆ ತಿಪಟೂರು ತಾಲ್ಲೂಕು ಬರಡಾಗಲಿಕ್ಕೆ ಸಾಧ್ಯವಿಲ್ಲ. ಆದರೆ ನೀವು ಡಿಕ್ಲೇರ್ ಮಾಡುತ್ತೀರಿ. ಹಾಸನವನ್ನು ಡಿಕ್ಲೇರ್ ಮಾಡುತ್ತೀರಿ, ಹೊಳೆನರಸೀಪುರವನ್ನು ಡಿಕ್ಲೇರ್ ಮಾಡುತ್ತೀರಿ. ಆದರೆ ಇದರ ರಿಫ್ಲೆಕ್ಷನ್ ಏನಾಗುತ್ತದೆ?

ಶ್ರೀ ಅರಗ ಜ್ಞಾನೇಂದ್ರ:– ತಾವು ಇದನ್ನು ಪುನರ್ ಪರಿಶೀಲನೆ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್:– ಉತ್ತರ ಕೊಡುವಾಗ ಇದರಲ್ಲಿ ವ್ಯಯಕ್ತಿಕವಾಗಿ ಏನೂ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:– ತಾವು ಇದನ್ನು ಪುನರ್ ಪರಿಶೀಲನೆ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್:– ಉತ್ತರ ಕೊಡುವಾಗ ಇದರಲ್ಲಿ ವೈಯಕ್ತಿಕವಾಗಿ ಏನೂ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:– ಇದನ್ನು ಮತ್ತೊಂದು ಸಲ ರಿವ್ಯೂ ಮಾಡಬೇಕು. ಯಾವ್ಯಾವ ತಾಲ್ಲೂಕುಗಳು ಬರಪೀಡಿತ ಇದ್ದಾವೆ, ಈಗ ಯಾವ ತಾಲ್ಲೂಕುಗಳಿಗೆ ಬರ ಬಂದಿದೆ ಎನ್ನುವಂಥಾದ್ದನ್ನು ತಾವು ಮತ್ತೊಂದು ಸಾರಿ ಪುನರ್ ಪರಿಶೀಲನೆ ಮಾಡದೇ ಹೋದರೆ ನಮಗೆಲ್ಲ ಅನ್ಯಾಯವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:– ಉತ್ತರ ಕೊಡಲಿಕ್ಕೆ ಅವಕಾಶ ಕೊಡಿ.

ಶ್ರೀ ಗೋವಿಂದ ಎಂ ಕಾರಜೋಳ:– ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳು ಈಗಾಗಲೇ ವರದಿಯನ್ನು ಸಲ್ಲಿಸಿದ್ದಾರೆ, ತಹಸೀಲ್ದಾರರೂ ಕೂಡ ಇದು ಬಿಟ್ಟುಹೋಗಿದೆ, ಇದನ್ನು ಸೇರಿಸಬೇಕು ಎಂದು ವರದಿಯನ್ನು ಸಲ್ಲಿಸಿದ್ದಾರೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇದನ್ನು ಸೇರಿಸಿ ತಾವು ಉತ್ತರ ಕೊಟ್ಟುಬಿಟ್ಟರೆ ಒಳ್ಳೆಯದಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು:– ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಿದ್ದಾರೆ. ಹೀಗೆ ಎಲ್ಲರೂ ಎದ್ದುನಿಂತುಕೊಂಡರೆ ಹೇಗೆ?

ಶ್ರೀ ಆರ್. ಧ್ರುವನಾರಾಯಣ:– ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಕೂಡ ಯಳಂದೂರು ತಾಲ್ಲೂಕನ್ನು ಬರಪೀಡಿತ ಎಂದು ಡಿಕ್ಲೇರ್ ಮಾಡಿದ್ದೀರಿ. ಆದರೆ ಯಳಂದೂರು ತಾಲ್ಲೂಕು ಸಂಪೂರ್ಣವಾಗಿ ನೀರಾವರಿ ಪ್ರದೇಶ. ನಮ್ಮ ತಾಲ್ಲುಕನ್ನು ನೀರಾವರಿ ಪ್ರದೇಶವೆಂದು ಬರಪೀಡಿತ ತಾಲ್ಲೂಕುಗಳ ಪಟ್ಟಿಯಿಂದ ಬಿಡಬಾರದು. ದಯಮಾಡಿ ಚಾಮರಾಜನಗರ ತಾಲ್ಲೂಕನ್ನು ಬರಪೀಡಿತ ಪ್ರದೇಶ ಎಂದು ತಾವು ಡಿಕ್ಲೇರ್ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಅಂತಹ ತೀವ್ರವಾದ ಬರಗಾಲ ಇದ್ದಂಥ ದಿನಮಾನಗಳಲ್ಲಿ ಕೂಡ 157 ತಾಲ್ಲೂಕುಗಳು ಮಾತ್ರ ಬರಪೀಡಿತ ಪ್ರದೇಶಗಳೆಂದು ಘೋಷಿಸಲ್ಪಟ್ಟಿದ್ದವು. ಈಗ ನಾನು ಕನ್ಸಿಡರ್ ಮಾಡುವುದಿಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಇಲ್ಲಿ ಬಂದಿರತಕ್ಕ ಪ್ರಶ್ನೆ ಏನೆಂದರೆ ಇವತ್ತು ಇದು ಎಂಬತ್ತು ತಾಲ್ಲೂಕುಗಳಿಗೆ ಸೀಮಿತವಾಗಿರುವುದಿಲ್ಲ. ಕುಡಿಯುವ ನೀರಿನ ವಿಚಾರದಲ್ಲೂ ಕೂಡ ಇನ್ನು ಮುಂದೆ ಬರತಕ್ಕಂಥ ದಿನಮಾನಗಳಲ್ಲಿ ಅವು ಉಲ್ಬಣವಾದಂಥ ಸ್ಥಿತಿ ಇರುತ್ತದೆ. ಈಗ ಯಾವುದೇ ಒಂದು ನಿರ್ಧಾರ ಆಗಿರತಕ್ಕಂಥಾದ್ದು ಅದು ಯಾವಾಗಲೂ ಸಮಂಜಸವಾಗಿ ಇರುತ್ತದೆ ಎಂದು ನಾವು ಭಾವಿಸಿರುವುದಿಲ್ಲ. ಇವತ್ತು ಅಲ್ಲಿ ಇರತಕ್ಕಂಥ ಅಂಕಿಸಂಖ್ಯೆಗಳು, ಮತ್ತು ವರದಿಗಳು ಏನಿವೆ ಅವುಗಳ ಆಧಾರದ ಮೇಲೆ ನಾವು ಮಾಡಿರುತ್ತೇವೆ. ಈಗ ಚಿಕ್ಕನಾಯಕನಹಳ್ಳಿಯನ್ನು ಬಿಡಬೇಕು ಅಥವಾ ಮುಧೋಳನ್ನು ಬಿಡಬೇಕು ಎನ್ನತಕ್ಕಂಥ ಪ್ರಶ್ನೆ ಯಾರ ಹತ್ತಿರಾನೂ ಬಂದಿರುವುದಿಲ್ಲ. ಇಲ್ಲಿ ಇರತಕ್ಕಂಥಾದ್ದು ಇಡೀ ರಾಜ್ಯದಲ್ಲಿ ಯಾವುದೇ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದರೆ, ಅದಕ್ಕೆ ನಾವೇ ಉತ್ತರ ಕೊಡಬೇಕಾಗುತ್ತದೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ತನ್ನ ಎಲ್ಲಾ ಸಂಪೂರ್ಣವಾದಂಥ ಜವಾಬ್ದಾರಿ ಮೇಲೆ ಅದನ್ನು ಮಾಡಬೇಕಾದಂಥ ಸಂದರ್ಭದಲ್ಲಿ ಈಗ ಆಗಿರತಕ್ಕಂಥ ಎಂಬತ್ತು ತಾಲ್ಲೂಕುಗಳೇ ಬಹಳ ವೈಜ್ಞಾನಿಕವಾಗಿ ಸರಿಯಾದದ್ದು ಎಂದು ನಾನೇನೂ ಹೇಳುವುದಿಲ್ಲ. ಇನ್ನೂ ಸರಿಪಡಿಸಬೇಕಾಗಿರತಕ್ಕಂಥಾದ್ದು ಇದೆ, ನಿಯಮಾವಳಿಗಳನ್ನು ಸರಿಪಡಿಸಬೇಕಾದದ್ದು ಇದೆ. ತಾವು ಮುಂದೆ ಬರತಕ್ಕಂಥ ದಿನಮಾನಗಳಲ್ಲಿ ಏನು ಸಲಹೆಗಳನ್ನು ಕೊಡುತ್ತೀರಿ ಅದನ್ನು ಸೇರಿಸಿಕೊಳ್ಳುತ್ತಲೇ ನಾವು ಹೋಗುತ್ತೇವೆ. ಈಗ ಬರಗಾಲ 175 ತಾಲ್ಲೂಕುಗಳಿಗೂ ಆಗಿದೆ ಎಂದು ಹೇಳಿದರೆ ಅದೇನಾದರೂ ಖರ್ಚು ಬರುತ್ತದೆ ಎಂದು ಹೇಳಿ ಸಂತೋಷವಾಗಬಹುದು. ಆದರೆ ಹಾಗೆ ಇರತಕ್ಕಂಥ ವಸ್ತುಸ್ಥಿತಿ ಇರುವುದಿಲ್ಲ. ಬೇರೆಬೇರೆ ಸಂದರ್ಭಗಳೂ ಕೂಡ ಇರುತ್ತವೆ. ಈಗ ಪ್ರವಾಹ ಪೀಡಿತ ಪ್ರದೇಶಗಳು ಆಗಿರತಕ್ಕಂಥ ಜಿಲ್ಲೆಗಳೂ ಕೂಡ ನಮ್ಮ ಹತ್ತಿರ ಇವೆ. ಆ ಕಾರಣಕ್ಕೆ ಒಂದು ಸ್ಥೂಲವಾದಂಥ ದೃಷ್ಟಿಕೋನದಿಂದ 18 ಜಿಲ್ಲೆಗಳಲ್ಲಿ 750 ಮಿಲಿಮೀಟರ್‌ಗಿಂತ ಕಡಿಮೆ ಮಳೆ ಬಿದ್ದಿರತಕ್ಕಂಥ ಪ್ರದೇಶಗಳು ಮತ್ತು ಇಸ್ರೋದಿಂದ ಬಂದಿರತಕ್ಕಂಥ ವರದಿ, ಮತ್ತು ಅಲ್ಲಿಯ ಜಿಲ್ಲಾಧಿಕಾರಿಗಳು ಕೊಟ್ಟ ವರದಿಯ ಆಧಾರದ ಮೇಲೆ ನಾವು ಮಾಡಿದ್ದೇವೆ. ಹೆಚ್ಚುವರಿಯಾಗಿರತಕ್ಕಂಥ ತಾಲ್ಲೂಕುಗಳನ್ನು ಸೇರಿಸಬೇಕೆಂದು ತಾವೇನು ಕಳುಹಿಸಿಕೊಟ್ಟಿದ್ದೀರಿ ಅದನ್ನೂ ಕೂಡ ಪರಿಗಣಿಸಿ ಬಹಳ ಉದಾರವಾಗಿ ಈ ವಿಚಾರದಲ್ಲಿ ಸರ್ಕಾರ ಮುಕ್ತ ಮನಸ್ಸಿನಿಂದ ನಿರ್ಣಯವನ್ನು ಖಂಡಿತವಾಗಿಯೂ ಮಾಡುತ್ತದೆ ಅಂತ ಹೇಳಿ ಈ ಅಧಿವೇಶನದಲ್ಲಿ ನಾನು ತಮಗೆ ಭರವಸೆಯನ್ನು ಕೊಡುತ್ತಿದ್ದೇನೆ. ಇಲ್ಲಿ ನನ್ನ ಪಾಲಿನ ವಿಚಾರ ಕೇವಲ ಸೀಮಿತವಾದದ್ದು. ಬರಗಾಲ ಕಾಮಗಾರಿಗೆ ಸಂಬಂಧಪಡತಕ್ಕಂಥ ರೀತಿಯಲ್ಲಿ ನಾವು ಒಟ್ಟು ಕೈಪಂಪಿನ ಕೊಳವೆ ಬಾವಿಗಳು ಮತ್ತು ತೆರೆದ ಬಾವಿಗಳ ಮೂಲಕ ಸರಬರಾಜು ಮಾಡಿರತಕ್ಕಂಥಾದ್ದು ಹೇಳುತ್ತೇನೆ. ದಿನಾಂಕ 30.9.2004ರಿಂದ ಹೆಚ್ಚಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು ಅದಕ್ಕೆ ಈಗ ಕ್ರಮ ತೆಗೆದುಕೊಂಡಿರುವಂಥಾದ್ದು. ಸಿ.ಆರ್.ಎಫ್.ನಿಂದ ಹಣ ಬಿಡುಗಡೆ ಆಗಿರತಕ್ಕಂಥಾದ್ದು 886. ಅಂದರೆ ಕೈಪಂಪಿನ ಕೊಳವೆ ಬಾವಿಗಳು ಮತ್ತು ತೆರೆದ ಬಾವಿಗಳ ಮೂಲಕ ಸರಬರಾಜು ಆಗಿರತಕ್ಕಂಥಾದ್ದು 886.

ಜನರೇಟರುಗಳನ್ನು ಒದಗಿಸಿ ನೀರನ್ನು ಪಂಪ್ ಮಾಡುತ್ತಿರುವುದು 5653. ಟ್ಯಾಂಕರುಗಳ ಮೂಲಕ ನೀರನ್ನು ಒದಗಿಸುತ್ತಿರುವುದು 318. ಈ ಎಲ್ಲಾ ವಿವರಗಳನ್ನು ಕೊಡತಕ್ಕಂಥಾದ್ದರ ಜತೆಗೆ 56,682 ಗ್ರಾಮೀಣ ಜನ ವಸತಿ ಪ್ರದೇಶಗಳಿವೆ. ಆ ಪ್ರದೇಶಗಳಿಗೆ ನಾವು ಕುಡಿಯುವ ನೀರನ್ನು ಒದಗಿಸಬೇಕಾಗಿರತಕ್ಕಂಥ ಕೆಲಸ ಒಂದು ನಾಗರಿಕ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಈಗ ಎಲ್ಲೆಲ್ಲಿ ನಾವು ಈ ರೀತಿಯಾದಂಥ ಕೆಲಸಗಳನ್ನು ಮಾಡಿದ್ದೇವೆ ಎನ್ನುವುದಕ್ಕೆ, ಈ ಕೆಳಕಂಡ ಜಿಲ್ಲೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಟ್ಯಾಂಕರುಗಳ ಮೂಲಕ ನೀರು ಸರಬರಾಜು 3–1–2005ರ ವರೆಗೂ ಕೊಟ್ಟಿರುವುದು ಏನಿದೆಯೆಂದರೆ, ಬೆಂಗಳೂರು ಗ್ರಾಮಾಂತರ 49, ಬೆಳಗಾವಿ 5, ಬೀದರ್ 1, ಬಿಜಾಪುರ 1, ಬಾಗಲಕೋಟೆ 1, ಕೋಲಾರ 30, ಕೊಪ್ಪಳ 2, ರಾಯಚೂರು 2–ಒಟ್ಟು 91 ಪ್ರದೇಶಗಳಲ್ಲಿ ಟ್ಯಾಂಕರುಗಳ ಮೂಲಕ ಕುಡಿಯುವ ನೀರನ್ನು ಕೊಡುತ್ತಾ ಇದ್ದೇವೆ. ಹಾಗೆಯೇ ಬೋರ್‌ವೆಲ್‌ಗಳ ಮೂಲಕ ಹೊಸದಾಗಿ ತಗೆದುಕೊಂಡಿರುವಂಥಾದ್ದು ಬಳ್ಳಾರಿ ಜಿಲ್ಲೆಯಲ್ಲಿ 22, ಚಿತ್ರದುರ್ಗದಲ್ಲಿ 20, ಕೋಲಾರದಲ್ಲಿ 88, ತುಮಕೂರಿನಲ್ಲಿ 1, ಒಟ್ಟು 131 ಕಡೆಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡತಕ್ಕಂಥಾದ್ದು, ಬೆಂಗಳೂರು ನಗರದಲ್ಲಿ ಎರಡು ಕಡೆಗೆ, ಬೆಂಗಳೂರು ಗ್ರಾಮಾಂತರದಲ್ಲಿ 1, ಕೋಲಾರದಲ್ಲಿ 4, ತುಮಕೂರಿನಲ್ಲಿ 1, ಚಿಕ್ಕಮಗಳೂರಿನಲ್ಲಿ 1, ರಾಯಚೂರಿನಲ್ಲಿ 1, ಧಾರವಾಡದಲ್ಲಿ 1 ಇವೆಲ್ಲವೂ ಕೂಡ ತಾತ್ಕಾಲಿಕವಾಗಿರತಕ್ಕಂಥಾದ್ದು. ಇದು ಮುಂಬರುವ ದಿನಗಳಲ್ಲಿ ಜಾಸ್ತಿಯಾಗುತ್ತದೆಯೇ ವಿನಹ ಕಡಿಮೆಯಾಗುವುದಿಲ್ಲ. ನಗರ ಪ್ರದೇಶಗಳಲ್ಲಿ ಮಾನ್ಯ ರಾಜೇಂದ್ರನ್‌ರವರು ಹೇಳಿದಂತೆ, ಅವರಗೂ ಕೂಡ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿರತಕ್ಕಂಥ ಆ ಜನಗಳಿಗೂ ಕೂಡ ಮಿನಿ ವಾಟರ್ ಸಪ್ಲೈ ಕೊಡುವುದರ ಜೊತೆಗೆ ಸಿ.ಆರ್.ಎಫ್. ಫಂಡಿನಿಂದ ಹಣ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಮೊನ್ನೆ 31–12–2004 ರಂದು ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. 2004–05ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ 2,415 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರತಕ್ಕಂಥಾದ್ದರಲ್ಲಿ ತಾಲ್ಲುಕುವಾರು, ಜಿಲ್ಲಾವಾರು ಕೊಟ್ಟಿರತಕ್ಕಂಥಾದ್ದು ಇದೆ. ಅನುದಾನ ಬಿಡುಗಡೆ ಮಾಡಿರುವಂಥ ಉದ್ದೇಶ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ 10 ಲಕ್ಷ ರೂಪಾಯಿಗಳು , ಪ್ರವಾಹ ಪರಿಹಾರಕ್ಕಾಗಿ 25 ಲಕ್ಷ ರೂ, ಬಾಗಲಕೋಟೆಗೆ 50 ಲಕ್ಷ ರೂ, ಪ್ರವಾಹ ಪರಿಹಾರಕ್ಕೆ 20 ಲಕ್ಷ ರೂ, ಬೆಳಗಾವಿ ಕುಡಿಯುವ ನೀರಿಗೆ 70 ಲಕ್ಷ ರೂ, ಬಳ್ಳಾರಿಗೆ 50 ಲಕ್ಷ ರೂ, ಬೀದರ್ 50 ಲಕ್ಷ ರೂ, ಬಿಜಾಪುರ 50 ಲಕ್ಷ ರೂ, ಚಾಮರಾಜನಗರ 10 ಲಕ್ಷ ರೂ, ಚಿಕ್ಕಮಗಳೂರು 20 ಲಕ್ಷ ರೂ, ಚಿತ್ರದುರ್ಗ 40 ಲಕ್ಷ ರೂ, ದಾವಣಗೆರೆ 20 ಲಕ್ಷ ರೂ, ಧಾರವಾಡ 50 ಲಕ್ಷ ರೂ, ಗದಗ್ 40 ಲಕ್ಷ ರೂ, ಗುಲ್ಬರ್ಗಾ 100 ಲಕ್ಷ ರೂ, ಹಾಸನ 30 ಲಕ್ಷ ರೂ, ಹಾವೇರಿ 70 ಲಕ್ಷ ರೂ, ಕೋಲಾರ 400 ಲಕ್ಷ ರೂ, ಕೊಪ್ಪಳ 20 ಲಕ್ಷ ರೂ, ಮಂಡ್ಯ 10 ಲಕ್ಷ ರೂ, ಮೈಸೂರು 20 ಲಕ್ಷ, ರೂ ರಾಯಚೂರು 40 ಲಕ್ಷ ರೂ, ತುಮಕೂರು 30 ಲಕ್ಷ ರೂ, ಅಂದರೆ 11 ಕೋಟಿ 80ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಹೋದ ತಿಂಗಳು ಬಿಡುಗಡೆ ಮಾಡಿದ್ದೇವೆ. ಅದರ ಹಿಂದೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೆವು. ಒಟ್ಟಿನಲ್ಲಿ ಕುಡಿಯುವ ನೀರಿನ

ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಬರಗಾಲದ ನಿಧಿಯಿಂದ ಕೊಟ್ಟಿರತಕ್ಕ ಹಣ 16.80 ಕೋಟಿ ರೂಪಾಯಿಗಳು. ಈ ಹಣ ಕಡಿಮೆ ಎಂಬುದನ್ನು ನಾನುಒಪ್ಪಿಕೊಳ್ಳುತ್ತೇನೆ. ಇವತ್ತು ಅವರು ಏನೇ ಹೇಳಿರಲಿ, ಇಲ್ಲಿಯವರೆಗೆ ಅಂದರೆ 2004–05ರ ಡಿಸೆಂಬರ್ ಅಂತ್ಯದವರೆಗೆ ನಾವು ಹಾಕಿಕೊಂಡಿರತಕ್ಕಂಥಾದ್ದು ಬರ ಪರಿಹಾರದ ಮೂಲಕ, ಯಾವ ಗುರಿಯನ್ನು ಇಟ್ಟುಕೊಂಡಿದ್ದೇವೆ ಹೊಸ ಕೊಳವೆ ಬಾವಿಗಳು ಅಂದರೆ ಹ್ಯಾಂಡ್‌ಪಂಪ್‌ಗಳ ಮೂಲಕ ತೆಗೆಯುವುದಕ್ಕೆ ಗುರಿ 4124 ಇಟ್ಟುಕೊಂಡಿದ್ದೇವೆ. ಇಲ್ಲಿಯವರೆಗೆ ಕೊರಸಿರತಕ್ಕ ಕೊಳವೆ ಬಾವಿಗಳು 2756. ಮಿನಿ ವಾಟರ್ ಸಪ್ಲೈಗೆ 1300 ಗುರಿ ಇಟ್ಟುಕೊಂಡಿದ್ದು, 633 ನ್ನು ಈಗಾಗಲೇ ಸಾಧಿಸಿದ್ದೇವೆ. ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ಗೆ 650 ಗುರಿ ಇದ್ದು, ಸಾಧನೆ 517 ಆಗಿದೆ. ಒಟ್ಟು ಡಿಸೆಂಬರ್ ಅಂತ್ಯದವರೆಗೆ ಇರತಕ್ಕ ಗುರಿ 6,074 ರಲ್ಲಿ 9,906 ನ್ನು ಸಾಧನೆ ಮಾಡಿರತಕ್ಕಂಥಾದ್ದು ಇದೆ. ಇವೆಲ್ಲಾ ಇದ್ದಾಗಲೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಸಾಧ್ಯ ಇಲ್ಲ. ಇದೊಂದು ಉಲ್ಬಣಗೊಂಡಿರತಕ್ಕಂಥ ಸಮಸ್ಯೆ. ಆ ಸಮಸ್ಯೆಯನ್ನು ಬಗೆಹರಿಸಲಿಕ್ಕಾಗಿಯೇ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಒಂದು ಟಾಸ್ಕ್‌ಫೋರ್ಸನ್ನು ಮಾಡುವಂತ ಸಂದರ್ಭಗಳಲ್ಲಿ, ಅಲ್ಲಿರುವಂಥ ಮುಖ್ಯಸ್ಥರನ್ನು, ಅದರಲ್ಲಿರುವಂಥ ಕಾರ್ಯನಿರ್ವಾಹಕ ಅಧಿಕಾರಿ ಯಾರದ್ದಾರೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿರತಕ್ಕಂಥಾದ್ದು, ಅದಕ್ಕೆ ವಿವಿಧ ಇಲಾಖೆಗಳ ಅಧಿಕಾರಿಗಳು ಆ ಕಾರ್ಯಪಡೆಯಲ್ಲಿ ಸದಸ್ಯರಾಗಿರುತ್ತಾರೆ. ಎರಡು ಲಕ್ಷ ರೂಪಾಯಿವರೆಗೂ ಮಂಜೂರಾತಿ ಮಾಡುವ ಅಧಿಕಾರ ಅವರಿಗೆ ಇರಲಿಲ್ಲ. ತಾಂತ್ರಿಕವಾಗಿ ಮೇಲಧಿಕಾರಿಗಳಿಗೆ ಹೋಗಿ ಅವರಿಂದ ಮಂಜೂರಾತಿ ಪಡೆಯಬೇಕಾಗಿತ್ತು. ಆ ಅಧಿಕಾರವನ್ನು ಅಲ್ಲಿರುವಂಥ ಕಾರ್ಯನಿರ್ವಾಹಕ ಅಧಿಕಾರಿಗೇ ಕೊಟ್ಟಿರುವುದರಿಂದ ತತ್‌ಕ್ಷಣದಲ್ಲೇ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತದೆ ಎನ್ನುವ ಕಾರಣಕ್ಕಾಗಿಯೇ, ಆ ವ್ಯವಸ್ಥೆಯನ್ನು ಮಾಡಿದರು. ಇಲ್ಲಿ ಅನೇಕ ಜನ ನಮ್ಮ ಸ್ನೇಹಿತರು ಕ್ಷೇತ್ರವಾರು ಮಾಡಿ ಎಂಬ ಮಾತನ್ನು ಹೇಳುತ್ತಾರೆ. ಆದರೆ, ಬರ ಪರಿಹಾರದಿಂದ ಬರತಕ್ಕಂಥಾದ್ದಾಗಲೀ ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡತಕ್ಕಂಥಾದ್ದು, ಅದು ಬ್ಲಾಕ್‌ವೈಸ್ ಎಂದರೆ ಒಂದು ತಾಲಲ್ಲಾಕಾವೈಸ್ ಹಣ ಬರತಕ್ಕ ಕಾರಣ ಆಗಿರುವುದರಿಂದ, ಈಗ ತಾವೇನು ಆ ಕೊಠಡಿಯಲ್ಲಿ ಸಲಹೆ ಕೊಟ್ಟಿದ್ದೀರಿ, ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಆ ತಾಲ್ಲೂಕಿನಲ್ಲಿರತಕ್ಕಂಥ ಕಾರ್ಯಪಡೆಯ ಅಧ್ಯಕ್ಷರು ಆಯಾ ಶಾಸಕರೇ ಆಗಿರುತ್ತಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈಗ ಹೇಳುತ್ತಾರೆ. ಶಾಸಕರು ಅಧ್ಯಕ್ಷರಾಗಿರತಕ್ಕಂಥಾದ್ದರಲ್ಲಿ ತಮಗೆ ಒಂದು ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳು ಬರಬಹುದು, ಮೂರು ಕ್ಷೇತ್ರಗಳು ಬರಬಹುದು. ಭೌಗೋಳಿಕವಾಗಿ ಬಹು ಪ್ರದೇಶ ಹೊಂದಿರತಕ್ಕ ಶಾಸಕ ಅದರ ಅಧ್ಯಕ್ಷನಾಗಿರುತ್ತಾನೆ. ಉಳಿದಿರತಕ್ಕಂಥವರೂ ಸಹ ಅಧ್ಯಕ್ಷರಾಗಿರುತ್ತಾರೆ. ಅವರೇನೂ ವೈಸ್ ಪ್ರೆಸಿಡೆಂಟ್ ಆಗಿರುವುದಿಲ್ಲ. ಅದರೊಳಗಿರತಕ್ಕಂಥಾದ್ದು ಬೇಕಾದರೆ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರನ್ನೂ ಸದಸ್ಯರನ್ನಾಗಿ ಮಾಡಿಕೊಳ್ಳಬಹುದು. ಸ್ವಲ್ಪಮಟ್ಟಿಗೆ ತಾವೆಲ್ಲಾ ಏನು ಸಹಕಾರ ಕೊಟ್ಟಿದ್ದೀರಿ, ಅದರಲ್ಲಿ ಮಾರ್ಪಾಡನ್ನು ಮಾಡಿ, ಮುಂದಿನ ದಿನಮಾನಗಳಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ, ಅಂತಹ ಸುತ್ತೋಲೆಯನ್ನು ನಾವು ಹೊರಡಿಸುತ್ತೇವೆ. ಮಾನ್ಯ

ಮುಖ್ಯಮಂತ್ರಿಗಳೂ ಈ ವಿಚಾರದಲ್ಲಿ ಪ್ರಸ್ತಾಪವನ್ನು ಈಗಲೇ ಮಾಡುತ್ತಾರೆ. ಈಗ ಬರಗಾಲಕ್ಕೆ ಸಂಬಂಧಪಟ್ಟಂತೆ ಹಣ ಬಿಡುಗಡೆ ಮಾಡಬೇಕೆಂದು ಕೊಟ್ಟಿರತಕ್ಕ ಮನವಿಯಲ್ಲಿ 1,147 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಇನ್ನೂ ಕೇಂದ್ರ ಸರ್ಕಾರದಿಂದ ಈ ಹಣ ಬಿಡುಗಡೆ ಆಗಿರುವುದಿಲ್ಲ. ಆದರೆ, ನನಗೆ ಬಂದಿರತಕ್ಕಂಥ ಆದೇಶದ ಪ್ರಕಾರ ನಾಲ್ಕುವರೆ ಲಕ್ಷ ಟನ್ ಆಹಾರಧಾನ್ಯವನ್ನು ನಾವು ಕೇಳಿದ್ದೆವು. ಅದರಲ್ಲಿ ಒಂದು ಲಕ್ಷದ 16 ಸಾವಿರ ಟನ್ ಆಹಾರಧಾನ್ಯವನ್ನು ನಮಗೆ ಬಿಡುಗಡೆ ಮಾಡಿದ್ದಾರೆ. ಈಗಾಗಲೇ ಗೊತ್ತಿದ್ದಂತೆ 80 ತಾಲ್ಲೂಕುಗಳು ಅಂದರೆ ಘೋಷಿಸಲ್ಪಟ್ಟ ತಾಲ್ಲೂಕುಗಳೇನಿವೆ, 80 ಬರಪೀಡಿತ ತಾಲ್ಲೂಕುಗಳಿಗೆ ಒಂದು ಲಕ್ಷ 16 ಸಾವಿರ ಟನ್ ಆಹಾರಧಾನ್ಯವನ್ನು ನಾವು ಅಲ್ಲಿರತಕ್ಕ ಕಾರ್ಯಕ್ರಮಗಳಿಗೆ ವಿನಿಯೋಗ ಮಾಡತಕ್ಕಂಥಾದ್ದು. ಉದ್ಯೋಗ ಸೃಜನೆ, ಕುಡಿಯುವ ನೀರು, ನೈರ್ಮಲ್ಯ, ಆರೋಗ್ಯ, ಪೌಷ್ಟಿಕ ಆಹಾರ ಈ ಎಲ್ಲಾ ಕೊಡತಕ್ಕ ಸಮಗ್ರವಾದಂಥ ಕಾರ್ಯಕ್ರಮವನ್ನು ರೂಪಿಸಲೇಬೇಕಾಗುತ್ತದೆ. ಆದಾಯ ಇದ್ದಾಗ ಮಾತ್ರ ಬರಗಾಲ ಎನ್ನುವ ಪ್ರಶ್ನೆ ಇರುತ್ತದೆ. ಆದರೆ, ಇದರಲ್ಲಿ ಆದ್ಯತೆ ಕುಡಿಯುವ ನೀರು ಅದು ಯಾವುದೇ ಪ್ರಸಂಗವಾಗಿದ್ದರೂ ಕೂಡ ಈಗಾಗಲೇ ನಮ್ಮ ಕಂದಾಯ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿಯ ಕಾರ್ಯದರ್ಶಿಗಳು ಕೋಲಾರಕ್ಕೆ ಜಂಟಿಯಾಗಿ ಹೋಗಿಬಂದಂಥ ಸಂದರ್ಭದಲ್ಲಿ ಅವರಿಗೆ 4 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಈ ಹಣ ಬಿಡುಗಡೆ ಮಾಡತಕ್ಕ ವಿಚಾರದಲ್ಲಿ ಯಾವುದೇ ತೊಂದರೆ ಈ ಸರ್ಕಾರಕ್ಕೆ ಇಲ್ಲವೆನ್ನುವ ಮಾತನ್ನೂ ಈ ಸಂದರ್ಭದಲ್ಲಿ ಹೇಳುತ್ತೇವೆ. ನಾನೂ ಕೂಡ ಧಾರವಾಡ, ಗದಗ್, ಬೆಳಗಾವಿ, ರಾಯಚೂರು ಮೊದಲಾದ ಜಿಲ್ಲೆಗಳಿಗೆ ಹೋಗಿರುವುದಲ್ಲದೆ, ಮೈಸೂರಿನ ವಿಭಾಗ ಮಟ್ಟದ ಒಂದು ಸಮಿತಿಯನ್ನು ಕರೆದು, ಅಲ್ಲಿ ಸಮೀಕ್ಷೆಯನ್ನು ಮಾಡಿ, ಅಲ್ಲಿ ಮಾರ್ಚ್ ಅಂತ್ಯಕ್ಕೆ ಬೇಕಾಗಬಹುದಾದಂಥ ಕ್ರಿಯಾಯೋಜನೆಯನ್ನು ತಯಾರು ಮಾಡಿ ಎಂದು ಅವರಿಗೆ ಹೇಳಿದ್ದೇವೆ. ಮಾರ್ಚ್ ಅಂತ್ಯಕ್ಕೆ ಇರತಕ್ಕಂಥ ಸಮಸ್ಯಾತ್ಮಕ ಗ್ರಾಮಗಳು ಯಾವುವು ಎಂದು ಒಂದು ಪಟ್ಟಿ ಮಾಡತಕ್ಕಂಥಾದ್ದು. ಟ್ಯಾಂಕರ್‌ನಿಂದ ನೀರು ಕೊಡತಕ್ಕಂಥಾದ್ದು ಯಾವುದು ಎಂಬುದನ್ನು ಪಟ್ಟಿ ಮಾಡುವುದು. ಮಾರ್ಚ್ ನಂತರ, ಜೂನ್‌ವರೆಗೆ ಇರತಕ್ಕಂಥಾದ್ದು, ಮತ್ತೆ ಮುಂಗಾರು ಮಳೆ ಬರತಕ್ಕಂಥ ಪ್ರದೇಶದವರೆಗೂ ಕೂಡ ಯಾವ ಯಾವ ತಾಲ್ಲೂಕುಗಳು ಇಂತಹ ರೀತಿಯಲ್ಲಿ ಆಗಬಹುದೆಂದು ತಿಳಿದು ಒಂದು ಪರ್ಯಾಯವಾಗಿರತಕ್ಕ ಕ್ರಿಯಾಯೋಜನೆಯನ್ನು ಕೂಡ ನೀವು ತಯಾರು ಮಾಡಬೇಕೆಂದು ಹೇಳಿದ್ದೇವೆ. ಈಗೇನು ಸನ್ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯತಕ್ಕ ಸಭೆ ಬರುತ್ತದೆ, ಆ ಸಭೆಯಲ್ಲಿಯೂ ಕೂಡ ಈ ಕ್ರಿಯಾ ಯೋಜನೆ ಮಂಡಿಸಲ್ಪಡುತ್ತದೆ. ಆ ರೀತಿ ಮಂಡಿಸಲ್ಪಟ್ಟಿರತಕ್ಕ ಕ್ರಿಯಾ ಯೋಜನೆಗಳನ್ನು, ಅಲ್ಲಿ ಅಧಿಕಾರಿಗಳು ಕೊಟ್ಟ ವರದಿಯ ಮೇಲೆ ಶಾಸಕರು ತಮ್ಮ ಅನುಭವ ಮತ್ತು ಆ ಪ್ರದೇಶದಲ್ಲಿ ತಿರುಗಾಡಿದ ಅನುಭವದ ಮೇಲೆ, ಅವರೂ ಕೂಡ ಅದಕ್ಕೆ ಬೇಕಾಗಿರತಕ್ಕ ವಿಚಾರಗಳನ್ನು ಸೇರಿಸಬಹುದು. ಆ ಕ್ರಿಯಾ ಯೋಜನೆಯಲ್ಲಿ ಬೇರೆ ಬೇರೆ ಊರುಗಳನ್ನು ಸೇರಿಸುವುದಕ್ಕೂ ಕೂಡ ತಮಗೆ ಅಂತರ್ಗತವಾದಂಥ ಅಧಿಕಾರ ಇದೆ. ಆ ಮೂಲಕವಾಗಿ ಅದನ್ನು ತಾವು ಮಾಡಬಹುದು. ಕೆ.ಪಿ.ಟಿ.ಸಿ.ಎಲ್.ನವರಿಗೆ ಬರ ಪರಿಹಾರ ನಿಧಿಯಿಂದ 25 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಅದರಲ್ಲಿರತಕ್ಕಂಥಾದ್ದು ನೀವು ಎನ್.ಆರ್.ಡಬ್ಲ್ಯು.ಇ.ಎಸ್. ಮಾಡತಕ್ಕಂಥ

ಸಂದರ್ಭ ಇದ್ದಾಗ ಒಂದು ಲಕ್ಷ ರೂಪಾಯಿವರೆಗೆ ಖರ್ಚು ಮಾಡಬಹುದು. ಅದು ಕುಡಿಯುವ ನೀರಿನ ಸರಬರಾಜು ಯೋಜನೆ ಇದ್ದರೆ 50 ಸಾವಿರ ರೂಪಾಯಿ ಖರ್ಚು ಮಾಡಬಹುದೆಂದು 25 ಕೋಟಿ ರೂಪಾಯಿಗಳನ್ನು ಈಗಾಗಲೇ ನಾವು ಕೆ.ಪಿ.ಟಿ.ಸಿ.ಎಲ್.ನವರಿಗೆ ಕೊಟ್ಟಿದ್ದೇವೆ. ಇದರ ಜೊತೆಗೆ ಮಾನ್ಯ ಶಾಸಕರು ಮತ್ತು ಬೇರೆ ಬೇರೆ ಕಡೆಗೆ ಬಂದಿರತಕ್ಕ ಸಲಹೆಗಳು ತಾವು ಹೊಸದಾಗಿ ಬಾವಿಯನ್ನು ತೆಗೆಯಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂಬ ಮಾತನ್ನು ಹೇಳಿದಿರಿ. ಆ ಕಾರಣಕ್ಕಾಗಿಯೂ ಕೂಡ, ನೆನ್ನೆ ಬರ ಪರಿಹಾರಕ್ಕೆ ಸಂಬಂಧಪಟ್ಟಂಥ ರಾಜ್ಯಮಟ್ಟದಲ್ಲಿ 15 ದಿವಸಕ್ಕೊಮ್ಮೆ ಸಲ ನಾವು ಸಚಿವ ಸಂಪುಟದ ಉಪ ಸಮಿತಿ ಸೇರುತ್ತದೆ. ಕಾಲ ಕಾಲಕ್ಕೆ ಬಂದಿರತಕ್ಕ ವರದಿಯನ್ನು ಪರಿಶೀಲಿಸುತ್ತದೆ. ಅದು ಸಚಿವ ಸಂಪುಟದ ಸಭೆಗೆ ಶಿಫಾರಸ್ಸನ್ನು ಕೊಡುವುದರ ಜೊತೆಗೆ, ನಿರ್ಣಯಗಳನ್ನೂ ಕೈಗೊಳ್ಳುತ್ತಾರೆ. 15 ದಿವಸಕ್ಕೊಮ್ಮೆ ಕರೆಯತಕ್ಕ ಈ ಸಭೆಯನ್ನು ಪರಿಸ್ಥಿತಿಯ ಅವಲೋಕನದ ಮೇರೆಗೆ 8 ದಿವಸಕ್ಕೂ ಕೂಡ ಕರೆಯುವುದಕ್ಕೆ ನಾವು ತಯಾರಾಗಿದ್ದೇವೆ. ಸರ್ಕಾರ ಕುಡಿಯುವ ನೀರಿನ ವಿಚಾರದಲ್ಲಾಗಲೀ, ಅಥವಾ ಉದ್ಯೋಗ ಸೃಜನ ವಿಚಾರದಲ್ಲಿಯಾಗಲಿ ಯಾವುದೇ ತರವಾಗಿರತಕ್ಕಂಥ ರೀತಿಯಲ್ಲಿ ತೊಂದರೆಯಾಗಲಾರದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ವಿರೋಧಪಕ್ಷದ ನಾಯಕರುಗಳು.

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ:– ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. ಈಗ ಮಾನ್ಯಮಂತ್ರಿಗಳು ಹಣ ಬಿಡುಗಡೆ ಮಾಡಿರತಕ್ಕಂಥ ಪಟ್ಟಿಯನ್ನು ಓದಿದರು. ಕೆಲವು ಜಿಲ್ಲೆಗಳಿಗೆ 30 ಲಕ್ಷ 40 ಲಕ್ಷ 20 ಲಕ್ಷ ಎಂದು ಹೇಳಿದರು. ಅದರಲ್ಲಿ ವಿಶೇಷವಾಗಿ ಕೋಲಾರಕ್ಕೆ 400 ಲಕ್ಷ ರೂ. ಮಾಡಿರತಕ್ಕಂಥಾದ್ದು, ಗುಲ್ಬರ್ಗಕ್ಕೆ 100 ಲಕ್ಷ ರೂ ಬಿಡುಗಡೆ ಮಾಡಿರತಕ್ಕಂಥಾದ್ದು ಸಂತೋಷ. ಆದರೆ ಅದೇ ರೀತಿಯಲ್ಲಿ ಬೇರೆ ಜಿಲ್ಲೆಗಳಲ್ಲೂ ಕೂಡ ಅದಕ್ಕಿಂತ ಹೆಚ್ಚು ಸಮಸ್ಯೆ ಉಲ್ಬಣವಾಗಿದ್ದರೂ ಕೂಡ ನೀವು 30 ಲಕ್ಷ ರೂ. 40 ಲಕ್ಷ ರೂ. ಬಿಡುಗಡೆ ಮಾಡಿರತಕ್ಕಂಥಾದ್ದನ್ನು ಏನೂ ಹೇಳಿದಿರಿ ಈಗ ಈ ಹಣವನ್ನು ಏನು ಬಿಡುಗಡೆ ಮಾಡಿದ್ದಿರಿ ಅದಕ್ಕೆ ಏನು ಮಾನದಂಡ ಇಟ್ಟುಕೊಂಡು ಬಿಡುಗಡೆ ಮಾಡಿದಿರಿ ಎನ್ನುವುದನ್ನು ತಾವು ಸ್ವಲ್ಪ ನನಗೆ ಹೇಳಬೇಕಾಗುತ್ತದೆ. ಅದರ ಜೊತೆಯಲ್ಲಿ ಈಗ ತಾವು ಏನು ಹಣವನ್ನು ಗ್ರಾಮ ಪಂಚಾಯತಿಗಳಿಗೆ, ಜಿಲ್ಲಾ ಪಂಚಾಯತಿಗಳಿಗೆ ನೇರವಾಗಿ ಕೊಡತಕ್ಕಂಥ ವ್ಯವಸ್ಥೆ ಏನು ಇದೆ ಅವರಿಗೆ ಈ ಒಂದು ಬರಗಾಲದ ಸಮಸ್ಯೆ ಇರತಕ್ಕಂಥಾದ್ದು ಕುಡಿಯುವ ನೀರಿನ ಸಮಸ್ಯೆ ಇರುವಂತಹ ಈ ಒಂದು ಹಿನ್ನೆಲೆಯಲ್ಲಿ ಅವರು ಬೇರೆ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳಬಾರದು ಮತ್ತು ಕುಡಿಯುವ ನೀರಿಗೆ ಆ ಹಣವನ್ನು ಉಪಯೋಗ ಮಾಡಬೇಕು ಎನ್ನತಕ್ಕಂಥ ಒಂದು ಸೂಚನೆಯನ್ನು ಕಳುಹಿಸಿಕೊಡತಕ್ಕಂಥಾದ್ದು ಸೂಕ್ತ ಅಂತ ಹೇಳಿ ನಾನು ಸಲಹೆಯನ್ನು ಮಾಡುತ್ತೇನೆ. ಅದರ ಜೊತೆಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಏನು ಮಾಡುತ್ತೀರಿ ಕೆಲವು ಕಡೆ ಎರಡು ತಾಲ್ಲೂಕುಗಳು ಅಲ್ಲ, ನಾಲ್ಕು ತಾಲ್ಲೂಕುಗಳು ಬರತಕ್ಕಂಥ ಕ್ಷೇತ್ರಗಳು ಇವೆ. ಈಗ ವೇಮಗಲ್ ಇದೆ ಅದಕ್ಕೆ ನಾಲ್ಕು ತಾಲ್ಲೂಕುಗಳು ಬರುತ್ತದೆ, ನನ್ನ ಕ್ಷೇತ್ರದಲ್ಲೂ ಕೂಡ ನಾಲ್ಕು ತಾಲ್ಲೂಕುಗಳು ಬರುತ್ತವೆ. ಅಲ್ಲಿ ಯಾವ ರೀತಿ ವ್ಯವಸ್ಥೆಯನ್ನು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಸ್ವಲ್ಪ ಬೆಳಕು ಚೆಲ್ಲ ಬೇಕಾಗುತ್ತದೆ.

ಶ್ರೀ ಕೆ.ರಘುಪತಿ ಭಟ್:– ಮಾನ್ಯ ಅಧ್ಯಕ್ಷರೆ ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ತಮ್ಮ ಬರಪರಿಹಾರ ಪಟ್ಟಿಯಲ್ಲಿ ಓದಲೇ ಇಲ್ಲ ಸಾರ್.

ಅಧ್ಯಕ್ಷರು:– ಈಗ ಉತ್ತರ ಕೊಡುತ್ತಿದ್ದಾರೆ. ಉತ್ತರ ಆದ ಮೇಲೆ ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ. ಮಧ್ಯೆ ಮಧ್ಯೆ ಈ ತರಹ ಆದರೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಉತ್ತರ ಪೂರ್ಣವಾಗುವುದಿಲ್ಲ. ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕು. ನಾವು ನಿಯಮಗಳ ಮೇಲೆ ಹೋಗಬೇಕು.

ಶ್ರೀ ಕೆ.ರಘುಪತಿ ಭಟ್:– ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಬರ ಇಲ್ಲದಿದ್ದರೂ ಕುಡಿಯುವ ನೀರಿಗೆ ತೊಂದರೆ ಇದೆ.

ಶ್ರಿ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಾವು ತಮ್ಮ ಕೊಠಡಿಯಲ್ಲಿ ತಮ್ಮ ಜೊತೆ ಸಮಾಲೋಚನೆ ಮಾಡಿದಾಗ, 224 ತಾಲ್ಲೂಕುಗಳು ಏನಿವೆ ಅವುಗಳೆಲ್ಲವನ್ನು ಬರಗಾಲದ ಲೆಕ್ಕದಲ್ಲಿ ಸೇರಿಸಿಕೊಂಡು ಆ ಸಮಿತಿ ಮಾಡುತ್ತೇವೆಂದರು, ಅದಕ್ಕೆ ನಾವು ಒಪ್ಪಿಕೊಂಡೆವು. ಅದರಿಂದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗೆ ಅನ್ಯಾಯವಾಗುತ್ತೆ ಎನ್ನುವ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೂ ಅನುಕೂಲ ಮಾಡಿಕೊಡಬೇಕೆಂದು ಒಂದು ಒಪ್ಪಂದ ಮಾಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್:– ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ಒಂದು ವಿಚಾರವನ್ನು ಹೇಳುತ್ತೇನೆ. ಈಗ ಹಣವನ್ನು ತಾವು ವಿಂಗಡಣೆ ಮಾಡುವಂತಹ ಸಂದರ್ಭದಲ್ಲಿ ಹಂಚಿಕೆ ಮಾಡುವಂತಹ ಸಂದರ್ಭದಲ್ಲಿ ಜನಸಂಖ್ಯಾವಾರು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಗುಡ್ಡಗಾಡು ಪ್ರದೇಶದಲ್ಲಿ ಜನಸಂಖ್ಯಾವಾರು ಎಂದು ತಾವು ಏನಾದರೂ ಮಾಡಿದರೆ ಕೊಡಗಿಗೆ ವಿಶೇಷವಾಗಿ ನಮಗೆ ತುಂಬಾ ತೊಂದರೆಯಾಗುತ್ತದೆ ಆ ಒಂದು ಸಂದರ್ಭದಲ್ಲಿ ಗುಡ್ಡಗಾಡಿಗೆ ಪ್ರತ್ಯೇಕವಾದಂತಹ ಜನಸಂಖ್ಯೆ ಎನ್ನುವಂತಹ ಒಂದು ನಿಯಮ ಇದೆಯಲ್ಲಾ ಅದನ್ನು ಸಡಿಲಿಸಬೇಕು ಅಂತ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಜನಸಂಖ್ಯೆ ಆಧಾರದ ಮೇಲೆ ಕುಡಿಯುವ ನೀರಿನ ಸಮಸೆಯನ್ನು ಬಗೆಹರಿಸುತ್ತೇವೆ ಅಂತ ಅಲ್ಲ. ನಗರ ಪ್ರದೇಶಗಳಲ್ಲಿ ಜನವಸತಿ ಬಹಳ ಇರುತ್ತದೆ. ಎಲ್ಲಿಯೇ ಇರಲಿ ಅಂತ ಜನವಸತಿ ಪ್ರದೇಶ ಹ್ಯಾಬಿಟೆಂಟ್ಸ್ ಎಂದು ಹೇಳಿದ್ದೇವೆ. ಅವರು ಗುಡ್ಡದ ಮೇಲಿದ್ದರೂ ಸಹ ಅವರಿಗೆ ಕುಡಿಯುವ ನೀರನ್ನು ಒದಗಿಸಬೇಕಾಗಿರತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಆದ್ದರಿಂದ ಅವರಿಗೆ ಕನಿಷ್ಟಪಕ್ಷ ಕೈಪಂಪನ್ನಾದರೂ ಕೂಡ ನಾವು ಒದಗಿಸಿಕೊಡುತ್ತೇವೆ. ಆ ತರಹದಲ್ಲಿ ನಾವು ತಲಾ ಅನುದಾನ ಹಂಚಿದಂತೆ ಆ ತರಹ ಕುಡಿಯುವ ನೀರನ್ನು ತಲಾ ಇಂತಿಷ್ಟು ಅಂತ ಹಂಚುವುದಿಲ್ಲ. ಈಗ ಉಡುಪಿ ಜಿಲ್ಲೆಯವರು ದಕ್ಷಿಣ ಕನ್ನಡ ಜಿಲ್ಲೆಯವರು ಅವರು ಅದೃಷ್ಟವಂತರು ಮಾನ್ಯ ಅಧ್ಯಕ್ಷರೆ, ಅಲ್ಲಿ 750 ಮಿಲಿ ಮೀಟರ್‌ಗಿಂತಲೂ ಹೆಚ್ಚು ಮಳೆ ಬರುತ್ತದೆ. ನಿಮಗೆ ಭೂಮಿ ಇಲ್ಲ ಎನ್ನತಕ್ಕಂಥಾದ್ದು ಒಂದು ಕಡೆಗೆ ಸಮುದ್ರ ಮತ್ತೊಂದು ಕಡೆ ಅರಣ್ಯ ಪ್ರದೇಶವಿದೆ. ಇಲ್ಲಿಯವರೆಗೂ ಆಗಿರತಕ್ಕಂಥಾದ್ದರಲ್ಲಿ ಕುಡಿಯುವ ನೀರಿನ ವಿಚಾರವೇ ಆಗಿರಲಿ ಮತ್ತೊಂದು ವಿಚಾರವೇ ಆಗಿರಲಿ ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನಿಮಗೆ ಹೆಚ್ಚಿನ ಮಳೆಯಾಗುತ್ತದೆ.

ಶ್ರೀ ಕೆ. ಗೋಪಾಲ್ ಪೂಜಾರಿ:– ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಅತಿ ಹೆಚ್ಚು ಮಳೆ ಉಂಟು, ಆದರೆ ಕುಡಿಯುವ ನೀರು ಇಲ್ಲ. ಮಳೆ ಹೆಚ್ಚು ಹೆಚ್ಚು ಬರುತ್ತದೆ ಅದು ಪೂರಾ ಸಮುದ್ರಕ್ಕೆ ಹೋಗುತ್ತದೆ. ಸಮುದ್ರ ಇರುವಂತಹ ಪ್ರದೇಶದಲ್ಲಿ ನೀರು ಉಪ್ಪು, ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ನೀವು ಮಳೆ ಅಲ್ಲಿ ಹೆಚ್ಚು ಬರುತ್ತದೆ ಆದ್ದರಿಂದ ಬರಗಾಲ ಇಲ್ಲ ಎಂದು ಹೇಳುತ್ತೀರಿ. ಸಮುದ್ರದ ಉಪ್ಪು ನೀರು ಕುಡಿಯಲೇಬೇಕಾಗಿದೆ ನಮ್ಮ ಜಿಲ್ಲೆಯಲ್ಲಿ. ಸಮುದ್ರ ತೀರದ ಜನರಿಗೆ ಬಹಳ ತೊಂದರೆ ಇದೆ. ಬರಗಾಲವಿಲ್ಲ, ಸಮುದ್ರದ ನೀರು ಕುಡಿಯುತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಪೂಜಾರಿಯವರೆ, ನಾನು ಬರಗಾಲಕ್ಕೆ ಸಂಬಂಧಪಟ್ಟ ಸಿ.ಆರ್.ಎಫ್.ಫಂಡ್ ವಿಷಯ ಮಾತ್ರ ಮಾತನಾಡುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದಂತೆ ಶಾಸಕರ ಮಟ್ಟದಲ್ಲಿ ನಡೆಯತಕ್ಕಂಥ 175 ತಾಲ್ಲೂಕುಗಳಲ್ಲಿ ಅಧ್ಯಕ್ಷರೂ ಕೂಡ ಇರುತ್ತಾರೆ. ಅದಕ್ಕೆ ಕುಡಿಯುವ ನೀರಿನ ಸಮಸ್ಯೆಗೆ ನಿಮ್ಮ ಲೆಟರೆಹೆಡ್ ಫೈಲ್ ಇದೆ. ಎಷ್ಟೇ ಮಳೆ ಬಂದಿದ್ದರೂ ಕೂಡ ಅದು ಸಮುದ್ರಕ್ಕೆ ಹೋಗುತ್ತದೆ. ಆದ್ದರಿಂದ ಅಲ್ಲಿ ನೀರಿನ ತೊಂದರೆ ಇದೆ. ಇವತ್ತು ಇನ್ನೂ ತಮಾಷೆ ಅಂದರೆ ಅತ್ಯಂತ ಮಳೆ ಬೀಳುವಂತಹ ಚಿರಾಪುಂಜಿಯಲ್ಲಿ ನೀರಿನ ಸಮಸ್ಯೆ ಇದೆ. ಪತ್ರಿಕೆಯಲ್ಲಿ ತಾವು ನೋಡಿದ್ದೀರಿ. ಆದರೆ ಅದನ್ನು ಬರ ಅಂತ ಹೇಳಿ ಕುಡಿಯುವ ನೀರಿನ ಸಮಸ್ಯೆ ಅಂತ ಹೇಳುವುದಕ್ಕೆ ಆಗುವುದಿಲ್ಲ. ಬರಪೀಡಿತ ಪ್ರದೇಶಗಳೇ ಬೇರೆ ಕುಡಿಯುವ ನೀರಿನ ಸಮಸ್ಯೆಯೇ ಬೇರೆ. ಅದನ್ನು ಪ್ರತ್ಯೇಕವಾಗಿ ಯೋಜನೆ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ಇಲ್ಲಿರತಕ್ಕಂಥ 27 ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಿರ್ಣಯ ಮಾಡಿದ್ದಾರೆ. ಆ ವಿಚಾರವನ್ನು ತಮಗೆ ಅವರು ತಿಳಿಸುತ್ತಾರೆ. ಆದ್ದರಿಂದ ಈ ಸರ್ಕಾರ ಕುಡಿಯುವ ನೀರಿನ ವಿಚಾರವಾಗಲೀ ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ವಿಚಾರವೇ ಆಗಿರಲಿ ಬರಪರಿಹಾರವನ್ನು ನಿರ್ವಹಿಸುವಂತಹ ವಿಚಾರದಲ್ಲಿಯಾಗಲೀ ಅತ್ಯಂತ ಗಂಭೀರವಾಗಿ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸುತ್ತದೆ. ಮತ್ತೆ ನಾಳೆ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗುವಂತಹ ಸಂದರ್ಭದಲ್ಲಿಯೂ ಕೂಡ ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಹೆಚ್ಚಿನ ಹಣವನ್ನು ತರತಕ್ಕಂಥ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ. ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್ ಧರ್ಮಸಿಂಗ್:–(ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಸಿದ್ದರಾಮಯ್ಯನವರು ಒಂದು ಕಾರ್ಯಕ್ರಮಕ್ಕೆ ಹೋಗಿ ಬಂದು ಮಾತನಾಡತಕ್ಕಂಥ ಕಾಲದಲ್ಲಿ ಮಾನ್ಯ ಮಂತ್ರಿಗಳಾದ ಸತ್ಯನಾರಾಯಣರವರು ಉತ್ತರ ಕೊಡುತ್ತಿದ್ದರು, ಆಗ ಉತ್ತರ ಸಮರ್ಪಕವಾಗಿ ಬಂದಿಲ್ಲ, ಕೆಲಸಗಳು ಆಗಿಲ್ಲ ಎನ್ನತಕ್ಕಂಥ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಮತ್ತು ಇತರೇ ಎಲ್ಲಾ ಸದಸ್ಯರು ವಾಕ್‌ಔಟ್ ಮಾಡಿದರು, ಮತ್ತು ಕೊಠಡಿಯಲ್ಲಿ ಮಾತುಕತೆ ಆಯಿತು. ಮಾತುಕತೆ ಪ್ರಕಾರ ಅವರು ಬಂದಿದ್ದಾರೆ, ಚರ್ಚೆಯಲ್ಲಿ ಭಾಗವಹಿಸಿದ್ದಾರೆ, ಸರ್ಕಾರ ಕೊಡತಕ್ಕಂಥ ಉತ್ತರವನ್ನು ಸಮಾಧಾನಕರವಾಗಿ ಕೇಳುತ್ತಿದ್ದಾರೆ. ಇರತಕ್ಕದ್ದು ಎರಡೇ ವಿಷಯ. ಇವತ್ತು ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರು ತೊಂದರೆ ಮತ್ತೆ ಪ್ರಾರಂಭವಾಗಿದೆ. ತೊಂದರೆ ಅಂದರೆ ಎಲ್ಲಾ

ಮತಕ್ಷೇತ್ರದಲ್ಲಿಯೂ ಕೂಡ ವಾಟರ್ ಟೇಬಲ್ ಏನು ಇವತ್ತು ಕಡಿಮೆಯಾಗಿದೆ, ನೀರಿನ ಪ್ರಮಾಣ ಕಡಿಮೆಯಾಗಿದೆ ಇದರಿಂದ ಎಲ್ಲಾ ಕಡೆಗೆ ನೀರಿನ ಹಾಹಾಕಾರ ಇದೆ ಅದರಲ್ಲಿ ಎರಡನೇ ಪ್ರಶ್ನೆ ಇಲ್ಲ . ನಾವು ಸರ್ಕಾರ ನಡೆಸಕ್ಕಂಥ ಕಾಲದಲ್ಲಿ ಬಹಳಷ್ಟು ಕಡೆ ಪ್ರವಾಸ ಹೋದಂತಹ ಕಾಲದಲ್ಲಿಯೂ ಕೂಡ ಸಾಕಷ್ಟು ಶಾಸಕರು, ಲೋಕಸಭಾ ಸದಸ್ಯರು, ವಿರೋಧಪಕ್ಷದವರು, ನಮ್ಮ ಪಕ್ಷದಲ್ಲಿರತಕ್ಕಂಥವರೂ ಕೂಡ ಇದರ ಬಗ್ಗೆ ಎಫೆಕ್ಟೀವ್ ಮ್ಯಾನರ್‌ದಲ್ಲಿ ಕೆಲಸ ಮಾಡಬೇಕು, ವಾರ್ ಫುಟಿಂಗ್‌ನಲ್ಲಿ ಅಂತ ಒಂದು ಭಾವನೆ ಇದೆ. ಇವತ್ತು ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ನಾಲ್ಕು ದಿನಗಳ ಕಾಲ ಚರ್ಚೆಯಾಗಿದೆ. ಈಗ ಹೊಸದಾಗಿ ಮಾನ್ಯ ಸತ್ಯನಾರಾಯಣ್‌ರವರೂ ಕೂಡ ಮಂತ್ರಿಗಳಾಗಿ ಬಂದಿದ್ದಾರೆ. ಅವರು ಕೂಡ ನನಗೆ ಹೇಳಿದರು. ಇದಕ್ಕೆ ಒಂದು ಟಾಸ್ಕ್‌ಫೋರ್ಸ್ ರಚನೆ ಮಾಡಬೇಕು, ಜಿಯಾಲಜಿಸ್ಟ್ ಮತ್ತು ಬೆಸ್ಕಾಂ, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್ ಕನೆಕ್ಷನ್ ಕೊಡುವ ಸಂಬಂಧದಲ್ಲಿ ಅವರು ಜೊತೆಯಲ್ಲಿ ಬಂದು ಒಪ್ಪಿಗೆ ಪಡೆದು ಇವತ್ತು ಅವರು ರಚನೆ ಕೂಡ ಮಾಡಿದ್ದಾರೆ. ಇವತ್ತು ಏನಾಗಿದೆ ಶಾಸಕರ ಜವಾಬ್ದಾರಿ ಇದೆ. ಜನರ ಮತಗಳನ್ನು ಪಡೆದು ಯಾರು ಆಯ್ಕೆಯಾಗಿದ್ದಾರೆ they are answerable directly to the people ಅದಕ್ಕೆ ಇವತ್ತು ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಬೇಕು ಎನ್ನತಕ್ಕಂಥಾದ್ದು ಒಂದು, ಇದರಲ್ಲಿ ಕ್ಷೇತ್ರಗಳ ಪ್ರಕಾರ ಕೊಡಬೇಕೆಂದು ಮಾನ್ಯ ಶ್ರೀರಾಮರೆಡ್ಡಿ ಮತ್ತು ಬೇರೆ ಶಾಸಕರೂ ಕೂಡ ಹೇಳಿದ್ದಾರೆ ಅದಕ್ಕೆ ನಾವು ಅಡ್ಮಿನಿಸ್ಟ್ರೇಟರ್ ಆರ್ಡರ್ ಕೊಡತಕ್ಕಂಥ ರೀತಿಯಲ್ಲಿ ಆ ಪ್ರಕಾರ ಮಾಡೋಣ. ಇವತ್ತು ಕರ್ನಾಟಕ ರಾಜ್ಯದಲ್ಲಿ ಏನೊಂದು ಕುಡಿಯುವ ನೀರಿನ ಸಮಸ್ಯೆ ಇದೆ, ಮೊದಲೇ ಮಳೆ ಪ್ರಾರಂಭವಾಯಿತು, ನಂತರ ದೊಡ್ಡ ಮಳೆ ಬರಲಿಲ್ಲ. ದೊಡ್ಡ ಮಳೆ ಬಂದಿದ್ದರೆ ಈ ತರಹದ ತೊಂದರೆ ಬರುತ್ತಿರಲಿಲ್ಲ. ಅದಕ್ಕೆ ವಾಟರ್‌ಟೇಬಲ್ ಕೂಡ ಕಡಿಮೆಯಾಗಿದೆ. ಇದಕ್ಕೆ ಈಗಾಗಲೇ ನಮ್ಮ ಕಂದಾಯ ಸಚಿವರೂ ಕೂಡ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳಾದ ಮಾನ್ಯ ಶಿವರಾಜ್‌ಪಾಟೀಲ್‌ರವರಿಗೆ 1100 ಕೋಟಿ ರೂಪಾಯಿಗಳು ನಮಗೆ ಬೇಕು, ನಮ್ಮ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ನಿರ್ವಹಣೆಗೆ ಮತ್ತು ವಿಶೇಷವಾಗಿ ಕುಡಿಯುವ ನೀರಿಗೆ 150 ಕೋಟಿ ರೂಪಾಯಿಗಳು ಬೇಕು ಅಂತ ಮನವಿ ಕೊಟ್ಟಿದ್ದಾರೆ. ಮೊನ್ನೆ ಡೆಲ್ಲಿಗೆ ನಾನು ಮತ್ತು ಉಪ ಮುಖ್ಯಮಂತ್ರಿಗಳು ಹೋದಾಗ ಇಬ್ಬರೂ ಕೂಡಿ ಮಾನ್ಯ ಶಿವರಾಜ್‌ಪಾಟೀಲರಿಗೆ ಹೇಳಿದೆವು, ಏನು ನಮ್ಮ ಕಂದಾಯ ಸಚಿವರು ತಮಗೆ ಏನು ಒಂದು ಮನವಿ ಕೊಟ್ಟಿದ್ದಾರೆ ಅದಕ್ಕೆ ಮಾನ್ಯತೆ ಕೊಡಬೇಕು ಎಂದು ಕೇಳಿಕೊಂಡೆವು ಅದಕ್ಕೆ ಅವರೂ ಸಹ ಹಣ ಕೊಡತಕ್ಕಂಥ ರೀತಿಯಲ್ಲಿ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ಆದೇಶವನ್ನೂ ಕೂಡ ಕೊಟ್ಟಿದ್ದಾರೆ. ಮಾನ್ಯ ರಘುವೀರ ಪ್ರಸಾದ್‌ರವರು ನೇರವಾಗಿ ಈ ಒಂದು ಖಾತೆಯನ್ನು ನೋಡುತ್ತಿದ್ದಾರೆ ಅವರ ಜೊತೆಯಲ್ಲಿ ಕೂಡ ಕೃಷ್ಣಾದಲ್ಲಿ ಒಂದು ಸಭೆ ಆಯಿತು. ಆ ಸಭೆಯಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ ಕುಡಿಯುವ ನೀರಿನ ಸಮಸ್ಯೆಗೆ ಹೆಚ್ಚಿನ ಆದ್ಯತೆ ಕೊಡಬೇಕು 150 ಕೋಟಿ ರೂಪಾಯಿ ನಮಗೆ ಬೇಕಾಗಿದೆ ಅಂತ ಹೇಳಿ, ಈಗ ಸರ್ಕಾರ ಇಂತಹ ಒಂದು ಪರಿಸ್ಥಿತಿಯಲ್ಲಿ ಏನಾಗುತ್ತದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಾಹಾಕಾರ ಆಗುತ್ತಿದೆ. ಎಲ್ಲಾ ಕಡೆಗೂ ನಮಗೆ ಸಮಸ್ಯೆಗಳು ಉದ್ಭವವಾಗತಕ್ಕಂಥ ರೀತಿಯಲ್ಲಿ ಆಗಿದೆ. ಅದಕ್ಕೆ ನಾವು ಈಗಾಗಲೇ ಜಿಲ್ಲಾ ಪಂಚಾಯತಿಗೆ 146 ಕೋಟಿ ರೂಪಾಯಿಗಳು ಇಟ್ಟಿದ್ದೆವು. ಅದರಲ್ಲಿ 94 ಕೋಟಿ ರೂ ಖರ್ಚಾಗಿದೆ. ಇನ್ನು 51 ಕೋಟಿ ರೂಪಾಯಿಗಳನ್ನು ಜಿಲ್ಲಾ ಪಂಚಾಯತಿಗಳು

ಖರ್ಚು ಮಾಡಬೇಕಾಗಿದೆ. ಅದಕ್ಕೆ ನಾನು ಮತ್ತು ಉಪ ಮುಖ್ಯಮಂತ್ರಿಗಳು ಸಂಪುಟದಲ್ಲಿ ಹೇಳಿದ್ದೇವೆ ಇಷ್ಟು ಹಣ ಕೊಟ್ಟರೂ ಕೂಡ ಜಿಲ್ಲಾ ಪಂಚಾಯತಿಯವರು ಏಕೆ ಎಫೆಕ್ಟೀವ್ ಆಗಿ ಕೆಲಸ ಮಾಡುತ್ತಿಲ್ಲ? ಇರತಕ್ಕ ಹಣವನ್ನು ಖರ್ಚು ಮಾಡಬೇಕು 51 ಕೋಟಿ ರೂ ಅವರ ಹತ್ತಿರ ಇದೆ. ಮೊನ್ನೆ ಮಂಗಳವಾರ 27 ಕೋಟಿ 50 ಲಕ್ಷ ರೂ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಹತ್ತಿರ 20 ಕೋಟಿ ರೂ ಹಣ ಇದೆ. ಇಂತಹ ಸಂದರ್ಭ ಬಂದಾಗ ಖರ್ಚು ಮಾಡುವುದು ಇದೆ. ಕೇಂದ್ರದಿಂದ 150 ಕೋಟಿ ರೂ ಕೇಳಿದರೆ 25 ಕೋಟಿ ರೂ ಕೊಡುವ ಸೂಚನೆ ಇದ್ದು ಹಣವು ಕೂಡ ಬರುತ್ತಿದೆ. ಒಟ್ಟಾರೆ ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾವು ಕೊಟ್ಟಿದ್ದೇವೆ, ಖರ್ಚು ಮಾಡಿದ್ದೇವೆ. ಈ ಕುಡಿಯುವ ನೀರಿಗೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಬೇಕೆಂದು ನಿಮ್ಮ ಬೇಡಿಕೆ ಇದೆ, ನಾವೇನು ಹೇಳುತ್ತಿದ್ದೇವೆ ಅಂದರೆ ನೀವು ಆ ಜಿಯಾಲಜಿಸ್ಟ್‌ಗಳು ಅಲ್ಲಿ ಹೋಗಿ ಸರ್ವೆ ಮಾಡಿ ಎಂದು ನೀವು ಬರಸಮಿತಿಗೆ ತಾವೇ ಅಧ್ಯಕ್ಷರಾಗಿದ್ದೀರಿ ಅಧಿಕಾರ ನಿಮಗೆ ಬಂದಿದೆ. ದಟ್ ಇಸ್ ಎ ಸಬಾರ್ಡಿನೇಟ್ ಕಮಿಟಿ, ಆದರೂ ಕೂಡ ನೀವು ಒಪ್ಪಲಿಲ್ಲ, ನಿಮ್ಮ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಮಿತಿಯನ್ನು ನಾವು ಮಾಡುತ್ತೇವೆ, ಇಷ್ಟು ಹಣವನ್ನೂ ಕೂಡ ಕೊಟ್ಟಿದ್ದೇವೆ ಇನ್ನೂ ಎಷ್ಟೇ ಹಣ ಬೇಕಾದರೂ ಕೂಡ ಕೊಡುತ್ತೇವೆ. ಮುಂದಿನ ತಿಂಗಳು ಮತ್ತೆ ನಾವು ಸಭೆ ಸೇರುತ್ತಿದ್ದೇವೆ, ಕುಡಿಯುವ ನೀರಿನ ಬಗ್ಗೆ ಮತ್ತೆ ಹೆಚ್ಚು ಹಣ ಬೇಕಾದರೆ ಅದನ್ನು ಕೊಡುತ್ತೇವೆ. ನನ್ನ ಪಕ್ಕದಲ್ಲಿ ಹಣ ಕಾಸು ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿಗಳು ಕುಳಿತಿದ್ದಾರೆ. ಇದು ಸರ್ಕಾರದ ಹೊಣೆಯಾಗಿದೆ. ಕುಡಿಯುವ ನೀರಿನ ಬಗ್ಗೆ ತಾರತಮ್ಯವಿಲ್ಲದಂತೆ ನಡೆದುಕೊಳ್ಳುತ್ತೇವೆ. ಈ ಸಮಸ್ಯೆಯ ಬಗ್ಗೆ ಮಾನ್ಯ ಕಂದಾಯ ಸಚಿವರು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಸತ್ಯನಾರಾಯಣರವರು ಹೇಳಿದ್ದಾರೆ. ನಾವು ಏನೇನು ಮಾಡಿದ್ದೇವೆನ್ನುವ ಮಾತನ್ನೂ ಕೂಡ ಹೇಳಿದ್ದೇವೆ. ಹೇಳಿದರೂ ಕೂಡ ಬಹಳ ದೊಡ್ಡ ಗಂಭೀರವಾದ ಸಮಸ್ಯೆಗೆ ನಾವು ಹೇಳಿರತಕ್ಕದ್ದು ತಮಗೆ ಹಿಡಿಸಲಿಕ್ಕಿಲ್ಲ, ಆದರೂ ಕೂಡ ಸರ್ಕಾರವೇನು ಮಾಡಿದೆ ಎನ್ನುವ ವಿವರವನ್ನು ಕೊಟ್ಟಿದ್ದೇವೆ. ಮಾನ್ಯ ಸಭಾಧ್ಯಕ್ಷರೆ, ನಮ್ಮ ನಿಮ್ಮ ಮಾತಿನ ಪ್ರಕಾರ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಪ್ರಾರಂಭವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು):- ಮಾನ್ಯ ಮುಖ್ಯಮಂತ್ರಿಗಳೇ, ನಾವು ಈ ನಿಲುವಳಿಸೂಚನೆಯನ್ನು ತಂದಾಗ, ಕುಡಿಯುವ ನೀರಿನ ಜೊತೆಗೆ ವಿದ್ಯುತ್ ಕ್ಷಾಮದ ಬಗ್ಗೆ ಪ್ರಸ್ತಾಪ ಮಾಡಿ, ಅದನ್ನು ನಿಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡಲಾಗಿದೆ. ದಯಮಾಡಿ ನಾನು ನಿಮ್ಮಿಂದ ಉತ್ತರವೇನು ನಿರೀಕ್ಷೆ ಮಾಡುತ್ತೇನೆಂದರೆ, ಅಂತರ್‌ಜಲ ಕುಸಿದು ಹೋಗಿರುವುದರಿಂದ ರೈತನ ಪಂಪ್‌ಸೆಟ್ ಉಪಯೋಗ ಮಾಡದ ದುಸ್ಥಿತಿಗೆ ನಾವು ಬಂದಿದ್ದೇವೆ. ದಿವಸಕ್ಕೆ 5-6 ಗಂಟೆ ಕೂಡ ಸಮರ್ಪಕವಾದ ವಿದ್ಯುತ್ ಬರುತ್ತಿಲ್ಲ, ಹಾಗಾಗಿ, ಈಗೇನು 2003ರ ವರೆಗೆ ಬಾಕಿಯನ್ನು ಮನ್ನಾ ಮಾಡಿದ್ದೀರಿ, ಅದನ್ನು ಈ ಹಣಕಾಸಿನ ಸಾಲಿನವರೆಗೆ ಮನ್ನಾ ಮಾಡಿ, ಹೊಸದಾಗಿ ಪ್ರತಿತಿಂಗಳು ವಸೂಲಿ ಮಾಡುವ ಬಿಗಿ ಕ್ರಮವನ್ನು ತೆಗೆದುಕೊಳ್ಳಿ, ನಾವು ನಿಮಗೆ ಸಹಕಾರವನ್ನು ಕೊಡುತ್ತೇವೆ. ಎರಡನೆಯದಾಗಿ, ಕನಿಷ್ಟ ದಿನಕ್ಕೆ 10-12 ಗಂಟೆ ವಿದ್ಯುತ್ ಅನ್ನು ನೀವು ಕೊಡಬೇಕು, ಭಾಗ್ಯಜ್ಯೋತಿ ದೀಪಕ್ಕೆ ಸಂಬಂಧಿಸಿದಂತೆ ಇವತ್ತು ನಾವು ಅವರ ಓಟನ್ನು

ತೆಗೆದುಕೊಂಡು ಅಧಿಕಾರಕ್ಕೆ ಬಂದಿದ್ದೇವೆ, ಇವತ್ತು 4,5,6,7 ಸಾವಿರ ರೂಪಾಯಿಗಳ ವಿದ್ಯುತ್ ಬಾಕಿ ಇರುವ ನೂರಾರು ಉದಾಹರಣೆಯನ್ನು ಕೊಡುತ್ತೇನೆ. ಒಂದು ಸಾರಿ ರೈತರ ಪಂಪ್‌ಸೆಟ್‌ಗಳಿಗೆ ನಾವು ಮನ್ನಾ ಮಾಡಿದಾಗ ಕಡುಬಡವರು ಮತ್ತೆ ಕತ್ತಲೆಗೆ ಹೋಗುವುದು ಬೇಡ. ಅದಕ್ಕೆ ಒತ್ತಾಯ ಮಾಡುವುದೇನೆಂದರೆ, ಭಾಗ್ಯಜ್ಯೋತಿ ಬಾಕಿಯನ್ನು ಮನ್ನಾ ಮಾಡಿ, ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುವುದು, ಕಟ್ಟುನಿಟ್ಟಾಗಿ ಆ ತಿಂಗಳು ಭಾಗ್ಯಜ್ಯೋತಿಯ ಬಿಲ್ ಅನ್ನು ಆತ ಕಟ್ಟಲಿಲ್ಲವೆಂದರೆ ಅವತ್ತೇ ಡಿಸ್‌ಕನೆಕ್ಟ್ ಮಾಡಿ 6 ತಿಂಗಳು ಬಿಟ್ಟರೆ ಸಾವಿರಾರು ರೂಪಾಯಿಗಳಾಗುತ್ತದೆ, ಅದನ್ನು ಅವನು ಕಟ್ಟುವುಕ್ಕಾಗುವುದಿಲ್ಲ, ಆತ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿರುತ್ತಾನೆ. ಈ ಎರಡು ನಿರ್ಧಾರವನ್ನು ತಾವು ತೆಗೆದುಕೊಳ್ಳಬೇಕು, ಎಲ್ಲೂ ಕೂಡ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಇಲ್ಲ, ಮೊದಲಿದ್ದಂತಹ ರೀತಿಯಲ್ಲಿ ಆ ಡಿವಿಜನ್‌ನಲ್ಲಿ ಟ್ರಾನ್ಸ್‌ಫಾರ್ಮರ್ ಸಿಗುತ್ತಿತ್ತು, ವೈರ್ ಸಿಗುತ್ತಿತ್ತು ಮೂರು ತಿಂಗಳ ಹಿಂದೆ ಇಂಡೆಂಟ್ ಹಾಕಬೇಕು ಹೋಗಬೇಕು, ಕಷ್ಟವೇನು ಎನ್ನುವುದನ್ನು ವೈಯಕ್ತಿಕವಾಗಿ ಎಲ್ಲಾ ಶಾಸಕರು ಅನುಭವಿಸಿದ್ದೇವೆ. ಈ ಮೂರು ಪ್ರಮುಖವಾದ ವಿಷಯದ ಬಗ್ಗೆ ಏನಾದರೂ ರಿಲೀಫ್ ಕೊಡುತ್ತೀರಾ? ಯಾರು ಬಾಕಿ ಹಣ ಕಟ್ಟಿದ್ದಾರೆ, ಸರ್ಕಾರಿ ಆಜ್ಞೆ ಇಲ್ಲೇ ಇದೆ, ಯಾರು ರೈತ ಪಂಪ್‌ಸೆಟ್‌ಗಳ ಬಾಕಿಯನ್ನು ಕಟ್ಟಿದ್ದ 2003 ನಂತರ, ಅದನ್ನು ಅಡ್ಜೆಸ್ಟ್ ಮಾಡುತ್ತೇವೆಂದು ಹೇಳಲಾಗಿತ್ತು ಅದನ್ನೂ ಮಾಡಿಲ್ಲ, ಅನ್ಯಾಯವಾಗಿದೆ, ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವೇನು ಈಗ ಬರಗಾಲದಲ್ಲಿ ಬೋರ್ ಕೊರೆಯಿಸುತ್ತೇವೆ ಮಿನಿ ವಾಟರ್‌ಗೆ 50 ಸಾವಿರ ರೂ ಕೊಡಬೇಕು, ಮೇಜರ್ ಸ್ಕೀಂಗೆ ಒಂದು ಲಕ್ಷ ರೂಪಾಯಿ ಡಿಪಾಸಿಟ್ ಕೊಡಬೇಕು, ಕೊಡದಿದ್ದರೆ ಪಂಚಾಯಿತಿಗಳಿಗೆ ಗ್ರಾಂಟ್ ನಿಲ್ಲಿಸುತ್ತೇವೆಂದು ತಾವು ಹೇಳಿಬಿಟ್ಟಿದ್ದೀರಿ. ದಯಮಾಡಿ ಅದನ್ನು ಸರ್ಕಾರದ ವತಿಯಿಂದಲೇ ಭರಿಸಬೇಕು ಸ್ವಾಮಿ. ನಾವು ತುರ್ತಾಗಿ ನೀರು ಕೊಡಬೇಕೆಂದು ಹೇಳುತ್ತೇವೆ, ಎಲ್ಲೂ ಹ್ಯಾಂಡ್ ಪಂಪ್‌ಗೆ ನೀರು ಬರುವುದಿಲ್ಲ, ಎಲ್ಲಿಯಾದರೂ ಮೋಟಾರ್ ಅನ್ನು ಬಿಡಲೇ ಬೇಕಾಗುತ್ತದೆ, ಅದಕ್ಕೆ 50,ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡಬೇಕಾಗುತ್ತದೆ. ಟ್ಯಾಂಕ್‌ದು ಯಾವುದಾದರೂ ಬೋರ್‌ವೆಲ್ ಫೇಲ್ ಆದರೆ ಒಂದು ಲಕ್ಷ ರೂ ಡೆಪಾಸಿಟ್ ಮಾಡಬೇಕಾಗುತ್ತದೆ. ಕೊಡುವ ಹಣದಲ್ಲೇ ಅದನ್ನೆಲ್ಲಾ ಕೊಟ್ಟು ಬರಗಾಲದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ, ಅದನ್ನು ಎಕ್ಸೆಂಪ್ಟ್ ಮಾಡಬೇಕು. ರೈತರು ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ಒತ್ತಾಯ ಮಾಡಬಾರದು, 2003 ವರೆಗೆ ಏನು ಸರ್ಕಾರದ ಆದೇಶವಿತ್ತು, ಅದನ್ನು 2005ರ ವರೆಗಾದರೂ ತಾವು ಮುಂದುವರೆಸಬೇಕು, ಬರಗಾಲದಲ್ಲಿ ಅವರು ಹಣವನ್ನು ಕಟ್ಟಲಾಗುವುದಿಲ್ಲ. ಆ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ 50 ಸಾವಿರ ರೂಪಾಯಿ ಡಪಾಸಿಟ್ ಕಟ್ಟುವುದಕ್ಕೆ ಏನೂ ವ್ಯವಸ್ಥೆ ಇಲ್ಲ. ಜಿಲ್ಲಾ ಪಂಚಾಯಿತಿಗೂ ಹಣ ಕೊಡುವುದಿಲ್ಲ, ರೆಗ್ಯುಲರ್ ಸ್ಕೇರ್‌ಸಿಟಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಹೊಸ ಹೊಸ ವಿಚಾರ ನೀವು ಹೇಳುತ್ತಿಲ್ಲ, ಹೇಳಿದ್ದನ್ನೇ ಹೇಳುತ್ತಿದ್ದೀರಿ ಅದರ ಅಗತ್ಯವಿಲ್ಲ.

ಶ್ರೀ ಜಿ.ಎಸ್.ಶ್ರೀರಾಮರೆಡ್ಡಿ: ಮಾನ್ಯ ಸಚಿವರು ಜೆಡ್‌ಪಿಯಿಂದ ಮಿನಿವಾಟರ್‌ಸ್ಕೀಂನಲ್ಲಿ ಹಾಕಿಸುತ್ತಾರಲ್ಲಾ ಅದನ್ನು ಕೊಡುತ್ತಿಲ್ಲ. ರೈತರಿಂದ ಬರಗಾಲ ಇರತಕ್ಕ ಪ್ರದೇಶದಲ್ಲಾದರೂ ವಸೂಲ್ಮಾಡುವುದನ್ನು ಮುಂದೂಡಿ.

ಶ್ರೀಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಸ್ವಜಲಧಾರದಲ್ಲೂ ಕೂಡ ಈ ರೀತಿಯಾಗಿದೆ. ಸ್ವಜಲಧಾರದಲ್ಲಿ ಅಲ್ಲಿಂದ ಪೂರ್ತಿ ಕಾರ್ಯಕ್ರಮ ಬಂದಿದೆ, ಕರೆಂಟ್ ಚಾರ್ಜ್‌ಸ್ಗೆ ಅವರಿಗೆ ಅಪ್ರೂವಲ್ ಕೊಟ್ಟಿಲ್ಲ. ಕರೆಂಟ್ ಚಾರ್ಜ್‌ಸ್ ಅನ್ನು ಭರಿಸುವುದಕ್ಕೆ ಕೆಪಿಟಿಸಿಎಲ್ ಅವರನ್ನು ಕೇಳಿದರೆ 50 ಸಾವಿರ ರೂಪಾಯಿಯನ್ನು ಕೊಡುತ್ತಾರೆ, ಕಾರ್ಯಕ್ರಮದಲ್ಲಿ ದುಡ್ಡಿಲ್ಲ. ಗ್ರಾಮದವರೆಲ್ಲಾ ಸೇರಿಸಿ ಕೊಟ್ಟಿರುವ ಹಣಕ್ಕೆ ಕೆಪಿಟಿಸಿಎಲ್ ಅವರು ಕೇಳುತ್ತಿದ್ದಾರೆ, ಕಾರ್ಯಕ್ರಮ ಅಲ್ಲಿಗೆ ಬಂದು ನಿಂತಿದೆ. ಅದೇ ರೀತಿಯಾಗಿ ಸ್ಕೇರ್‌ಸಿಟಿಯಲ್ಲಿ 5 ಸಾವಿರ ರೂಪಾಯಿಯಂತೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ರೆಗ್ಯುಲರ್ ಸ್ಕೀಂಗೆ 50 ಸಾವಿರ ರೂಪಾಯಿಯಂತೆ ಕೇಳುತ್ತಿದ್ದಾರೆ. ಈಗ ಸ್ವಜಲಧಾರ ಕಾರ್ಯಕ್ರಮನೂ ಸಂಪೂರ್ಣವಾಗುವುದಿಲ್ಲ, ಸ್ಕೇರ್ ಸಿಟಿಯಲ್ಲಿ ತಾವೇನು ಡೆಪಾಸಿಟ್ ಮಾಡುತ್ತಿದ್ದೀರಿ, ದಯಮಾಡಿ ಅದನ್ನು ಈಗಿನ ಹಂತದಲ್ಲಿ ವೇ ಆಫ್ ಮಾಡಿಕೊಳ್ಳಿ, ಇಲ್ಲವೆಂದರೆ ನೀವು ಸ್ಕೇರ್‌ಸಿಟಿ ಸ್ಕೀಂನಲ್ಲಿ 5 ಸಾವಿರ ರೂಪಾಯಿಯಂತೆ ಮಿನಿಮಮ್ ತೆಗೆದುಕೊಂಡು ಕೆಪಿಟಿಸಿಎಲ್ ನವರು ಭರಿಸುವಂತಹ ಆದೇಶವನ್ನು ತಾವು ಕೊಡಬೇಕಾಗುತ್ತದೆ, ಇಲ್ಲವೆಂದರೆ ಸ್ವಜಲಧಾರ ಕಾರ್ಯಕ್ರಮ ಯಾವುದೂ ಕೂಡ ಸಂಪೂರ್ಣವಾಗುವುದಿಲ್ಲ, ಯಾವುದು ಎನರ್ಜೆಸ್ ಆಗುವುದಿಲ್ಲ ಎಲ್ಲವೂ ನಿಂತು ಹೋಗುವಂತಹ ಪರಿಸ್ಥಿತಿ ಬರುತ್ತದೆ.

ಅಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಈ ತರಹ ಆದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಅನ್ಯತಾ ಭಾವಿಸಬೇಡಿ, ನಮ್ಮಲ್ಲಿರುವ ಗೊಂದಲವೇನೆಂದರೆ, ಈಗೇನು ಮೊನ್ನೆ ಹಣ ಬಿಡುಗಡೆ ಮಾಡಿದ್ದೀರಿ, ಈ ಸಮಿತಿಗೆ ಶಾಸಕರು ಅಧ್ಯಕ್ಷರು ಎಂದಾದ ಮೇಲೆ ಆ ಸಮಿತಿಗೆ ಆ ಹಣ ಬರುತ್ತದೆ ತಾನೇ? ಅದನ್ನೇ ನಾವು ವಿತರಣೆ ಮಾಡುವುದು. ಹಣ ಡೈವರ್ಟ್ ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿರುವ ಸಮಿತಿಯ ಮೂಲಕ ಅದನ್ನು ವಿತರಣೆ ಮಾಡುತ್ತೇವೆ. ಅದು ಯಾರಿಗೂ ಕ್ಲಾರಿಫೈ ಆಗಲಿಲ್ಲ ಅದರಿಂದ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎನ್. ಧರ್ಮ್‌ಸಿಂಗ್ : ನಾವೇನು ಹಣ ಬಿಡುಗಡೆ ಮಾಡಿದ್ದೇವೆ ಎಲ್ಲಾ ಜಿಲ್ಲಾಪಂಚಾಯಿತಿಗಳಲ್ಲೂ ಕೂಡ 51 ಕೋಟಿ ರೂಪಾಯಿ ಇದೆ ಇಪ್ಪತ್ತೇಳೂವರೆ ಕೋಟಿ ರೂ ಮೊನ್ನೆ ಬಿಡುಗಡೆ ಮಾಡಿದ್ದೇವೆ, 20 ಕೋಟಿ ರೂ ಸ್ವಜಲಧಾರಾದಲ್ಲದೆ ಮತ್ತೆ 75 ಕೋಟಿ ರೂಪಾಯಿ ಕೂಡ ಬರುತ್ತಿದೆ. ತಾವು ಎಲ್ಲೆಲ್ಲಿ ಬೋರ್‌ವೆಲ್ ಹಾಕಬೇಕೆಂದು ಸಲಹೆ ಅಭಿಪ್ರಾಯವನ್ನು ಕೊಡುತ್ತೀರಿ ಆ ಪ್ರಕಾರವಾಗಿ ಕೆಲಸ ಮಾಡುವಂತಹ ಸೂಚನೆಯನ್ನು ಕೂಡ ಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಹಾಗೂ ಇಂಧನ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಹಲವಾರು ಹಿರಿಯ ಸದಸ್ಯರುಗಳು ಸೇರಿ ಈ ಕೆಪಿಟಿಸಿಎಲ್ ವತಿಯಿಂದ ಮಿನಿವಾಟರ್ ಇರಬಹುದು, ಮೇಜರ್ ವಾಟರ್‌ಸಪ್ಲೈ

ಇರಬಹುದು, ಸ್ಕೇರ್‌ಸಿಟಿಯ ಬಗ್ಗೆ ಈಗಾಗಲೇ ನಮ್ಮ ನಾಲ್ಕು ಕಂಪನಿಯವರಿಗೆ ನಿರ್ದೇಶನವನ್ನು ಕೊಟ್ಟಿದ್ದೇವೆ. ಕೆಪಿಟಿಸಿಎಲ್ ಕಡೆಯಿಂದ ಸ್ಕೇರ್‌ಸಿಟಿ ಅಲ್ಲದೆ ಬೇರೆ ಇದ್ದರೆ ಅವರ ಎಸ್ಟಿಮೇಟ್‌ನಿಂದ, ಆರ್‌ಡಿಪಿಆರ್ ಕಡೆ ಎಸ್ಟಿಮೇಟ್‌ನಿಂದ ಚಾರ್ಜ್ ಮಾಡಿ ಆ ಹಣವನ್ನು ಅವರು ಕಟ್ಟುತ್ತಿದ್ದಾರೆ. ಸ್ಕೇರ್‌ಸಿಟಿನಲ್ಲಿ ಕೆಲವು ಅಗ್ಮೆಂಟೇಷನ್ ಮಾಡುವಂತಹದ್ದು ಇರುವ ಮಿನಿವಾಟರ್ ಸಪ್ಲೈ ಇರಬಹುದು, ಮೇಜರ್ ವಾಟರ್ ಸಪ್ಲೈ ಇರಬಹುದು. ಈಗಾಗಲೇ ಸ್ಕೇರ್‌ಸಿಟಿ ಅಮೌಂಟ್‌ನಿಂದ ಮಾಡಬಹುದೆಂದು ಕಂದಾಯ ಸಚಿವರು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಆ ರೀತಿ ನಾವು ಮಾಡುತ್ತೇವೆ. ಅದಲ್ಲದೆ ಈ ನಾಲ್ಕೈದು ತಿಂಗಳಿನಿಂದ ಸುಮಾರು 2158 ಮಿನಿವಾಟರ್‌ಸಪ್ಲೈಗೆ ಹೊಸ ಕನೆಕ್ಷನ್ ಕೊಟ್ಟಿದ್ದೇವೆ. ಇನ್ನು ಉಳಿದ 300 ಪಂಚಾಯಿತಿಯಿಂದ ಅವರು ತೆಗೆದುಕೊಳ್ಳಬೇಕಾಗಿದೆ ಕೆಲವು ಪಂಚಾಯಿತಿಯವರು ತೆಗೆದುಕೊಂಡಿಲ್ಲ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ಬಾಕಿ ಉಳಿಕೆ 700 ಇದೆ ಅದನ್ನು ಕಳೆದ ತಿಂಗಳು 259 ಮಾಡಿದ್ದೇವೆ. ನಮ್ಮ ಇಲಾಖೆ ಅಧಿಕಾರಿಗಳಿಗೆ ಎಷ್ಟು ಮಿನಿವಾಟರ್ ಸ್ಕೀಂ ಇದೆ ಅದನ್ನು ಖಡಾಖಂಡಿತವಾಗಿ ಅಷ್ಟನ್ನು ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇನೆ. ಅದರ ಜೊತೆಗೆ ಕಳೆದ ಏಪ್ರಿಲ್‌ನಿಂದ ಈಚೆಗೆ 27464 ಇತ್ತು ಅದರಲ್ಲಿ 26928 ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ಹಾಕಿದ್ದೇವೆ, ಇನ್ನು 500 ಟ್ರಾನ್ಸ್‌ಫರ್ಮರ್ ಹಾಕುವುದಿದೆ ಅದನ್ನೂ ಕೂಡ ಹಾಕುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತಿದ್ದೇನೆ. ಭಾಗ್ಯಜ್ಯೋತಿಗೆ ಸಂಬಂಧಿಸಿದಂತೆ ಈಗಾಗಲೇ ನಾನು ಕಡತವನ್ನು ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ, ಅದು ಅವರಿಂದ ಕ್ಲಿಯರ್ ಆಗಿ ಬಂದಿದೆ, ಮುಂದೆ ಸಚಿವಸಂಪುಟಕ್ಕೆ ತಂದು ಆ ಬಗ್ಗೆ ನಿರ್ಣಯ ಮಾಡುವ ಕಾರ್ಯಕ್ರಮ ಇದೆ. ಡಿಸ್‌ಕನೆಕ್ಟ್ ಮಾಡದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸ್ಕೇರ್‌ಸಿಟಿ ಅಲ್ಲದ್ದು, ಈ ಕಮಿಟಿ ಬಂದು ಬೋರ್‌ವೆಲ್ ಹಾಕಿಸಿದರೆ ಅದಕ್ಕೆ ಡೆಪಾಸಿಟ್ ಇಲ್ಲದಂತೆ ಕನೆಕ್ಷನ್ ಕೊಡುವ ವ್ಯವಸ್ಥೆ ಮಾಡಿ ಎಂದು ಕೇಳಿದ್ದೆವು. ತಾವು ಹೇಳಿದ್ದೇನು ಎನ್ನುವುದು ಗೊತ್ತಾಗಬೇಕಲ್ಲಾ. ನಾವು ಸ್ಕೇರ್‌ಸಿಟಿ ಅಲ್ಲದೆ ಈಗ ಬೋರ್‌ವೆಲ್ ಕೊರೆಯಿಸುತ್ತೇವೆ ಸ್ವಾಮಿ ಅದಕ್ಕೆ 50 ಸಾವಿರ ರೂ ಕೊಡಿ ಎಂದರೆ ಕಮಿಟಿಯಲ್ಲಿ ಯಾವ ಹಣ ಉಳಿಯುತ್ತದೆ. ಅದರಲ್ಲಾದರೂ ಫ್ರೀಯಾಗಿ ಮಾಡಿಸಿಕೊಡಿ ಎಂದರೆ ಅವರು ಹಳೆಯದನ್ನೇ ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಇದೆ. ಒಂದು ಸ್ಕೇರ್ ಸಿಟಿಯದು. ಒಂದು ರೆಗ್ಯುಲರ್ ವಾಟರ್ ಸಪ್ಲೈ ರೆಗ್ಯುಲರ್ ವಾಟರ್ ಸಪ್ಲೈಯನ್ನು ಆಕ್ಷನ್ ಪ್ಲಾನ್‌ನಲ್ಲಿ ಮಾಡುವಂಥ ವಾಟರ್ ಸಪ್ಲೈ ಸ್ಕೀಮನ್ನು ಎಸ್ಟಿಮೇಟ್‌ನಲ್ಲಿ ಸೇರಿಸಿಕೊಂಡಿದ್ದಾರೆ. ಮಿನಿ ವಾಟರ್ ಸಪ್ಲೈಗೆ ಐವತ್ತು ಸಾವಿರ, ಬಂದು ಲಕ್ಷ ಇದಕ್ಕೆ ಎಂದು ಹೇಳಿ ಇಟ್ಟಿದ್ದಾರೆ. ಮುಂದಕ್ಕೆ ಕೊರೆಸುವುದು ಇದ್ದರೆ ಸ್ಕೇರ್‌ಸಿಟಿ ಒಳಗೆ ಇದ್ದರೆ ಅದನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಸ್ಕೇರ್‌ಸಿಟಿ ಒಳಗೆ ಯಾವುದೇ ಬಂದರೂ ಅದನ್ನು ಮಾಡುವುದಕ್ಕೆ ನಾನು ತಯಾರಿದ್ದೇನೆ. ಸ್ಕೇರ್‌ಸಿಟಿ ಬಿಟ್ಟು ಬೇರೆ ರೆಗ್ಯುಲರ್ ಆಗಿ ಆಕ್ಷನ್ ಪಾನ್‌ನಲ್ಲಿ ಬರುವಂಥದ್ದಕ್ಕೆಲ್ಲಾ ದುಡ್ಡು ಕಟ್ಟಬೇಕಾಗುತ್ತದೆ.

ಅಧ್ಯಕ್ಷರು : ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಸ್ಕೇರ್‌ಸಿಟಿಗೆ ವಿನಾಯಿತಿ ಇದೆ ಎಂದು ಹೇಳಿದ್ದಾರೆ. ಅವರು ಹೇಳಿದ್ದಾರೆ. ಮತ್ತೆ ಅದನ್ನೇ ಕೇಳಿದರೆ ಹೇಗೆ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಮಿಟಿಯಲ್ಲಿ ಏನಾದರೂ ಕೊಡುವುದಿದ್ದರೆ ಸ್ಕೇರ್‌ಸಿಟಿಯಲ್ಲಿ ಕೊಡುವುದಿದ್ದರೆ ಅದನ್ನು ಮಾಡಿಸುವುದಕ್ಕೆ ಪ್ರಯತ್ನಪಡುತ್ತೇನೆ. ಆಕ್ಷನ್ ಇರುವಂಥದ್ದು ಏನಾದರೂ ಇದ್ದರೆ ಅವರು ಎಸ್ಟಿಮೇಟ್‌ನಲ್ಲಿ ಛಾರ್ಜನ್ನು ಮಾಡಿದ್ದಾರೆ. ಎಸ್ಟಿಮೇಟ್‌ನಲ್ಲಿ ಛಾರ್ಜ್ ಮಾಡಿರುವುದನ್ನು ಆರ್‌ಡಿಪಿಆರ್ ನವರು ದುಡ್ಡನ್ನು ಕಟ್ಟುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ ಸಾರ್. ಒಂದು, ZP ಆಕ್ಷನ್ ಪ್ಲಾನ್‌ನಲ್ಲಿ ಇರುವುದಕ್ಕೆ ಪ್ರೊವೈಡ್ ಮಾಡಿರುತ್ತಾರೆ. ಅಲ್ಲಿಗೆ ಐವತ್ತುಸಾವಿರ, ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇನ್ನೊಂದು ಸ್ಕೇರ್‌ಸಿಟಿಯಲ್ಲೂ ಕೊಡುತ್ತಾರೆ. ಈಗ ತಾವೇನು ಕಮಿಟಿ ಮಾಡುತ್ತೀರಿ, ಇಲ್ಲಿ ನಾವು ಬೋರ್ ಹಾಕಿಸಿದರೆ ಅದು ಎರಡಕ್ಕೂ ಸೇರುವುದಿಲ್ಲ ಸಾರ್. ಅದನ್ನು ವಿನಾಯಿತಿ ಮಾಡುತ್ತೇವೆಂದು ಎರಡೂ ಹೇಳುತ್ತಿದ್ದಾರೆ. ನಮಗೇನೂ ಪದೇ ಪದೇ ಹೇಳುವ ಆಸೆ ಇಲ್ಲ.

ಅಧ್ಯಕ್ಷರು : ಅದನ್ನು ಹೇಳುತ್ತಿದ್ದಾರಲ್ಲಾ ಅವರು.

ಶ್ರೀ ಜೆ.ಸಿ.ಮಾಧುಸ್ವಾಮಿ : ಹೇಳಲಿಲ್ಲ. ಸ್ಕೇರ್‌ಸಿಟಿಯಲ್ಲೂ ಕೊಡುತ್ತೇನೆ ಎಂದು ಹೇಳುತ್ತಾರೆ. ಅಥವಾ ಆಕ್ಷನ್ ಪ್ಲಾನ್‌ನಲ್ಲೂ ಕೊಡುತ್ತೇನೆಂದು ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದನ್ನೂ ಸ್ಕೇರ್‌ಸಿಟಿಯಿಂದ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಆಗಬಹುದು.

3.ಪ್ರಕಟಣೆ

ವಿಷಯ : ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ವಿವರ.

ಅಧ್ಯಕ್ಷರು : ಒಂದು ಪ್ರಕಟಣೆ. ದಿನಾಂಕ: 2–2–2005 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕೆಳಕಂಡಂತೆ ನಿರ್ಣಯಿಸಲಾಗಿದೆ:

ಸದನವನ್ನು ದಿನಾಂಕ 3 ರಿಂದ 5 ನೇ ಫೆಬ್ರವರಿಗೆ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 7 ಗಂಟೆಯವರಿಗೂ ನಡೆಸಲಾಗುವುದು. ಎರಡನೆಯದಾಗಿ, ಮೇಲಿನ ದಿನಗಳಲ್ಲಿ ಶೂನ್ಯವೇಳೆ, ಗಮನ ಸೆಳೆಯುವ ಸೂಚನೆಗಳನ್ನು ರದ್ದುಪಡಿಸಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ, ಮತ್ತು ವಿಧೇಯಕಗಳನ್ನು ತೆಗೆದುಕೊಳ್ಳಲಾಗುವುದು. ಶನಿವಾರ ದಿನಾಂಕ: 5–2–2005 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡುವರು. ಇದಕ್ಕೆ ಸದನದ ಸಹಮತ ಇದೆಯೆಂದು ಭಾವಿಸುತ್ತೇನೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯ ಪ್ರಸ್ತಾಪ. ಈಗ ಮಾನ್ಯ ರಮೇಶ್‌ಕುಮಾರ್‌ರವರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿ ನಿತ್ಯ ಕೊನೆಯಲ್ಲಿ 6 ರಿಂದ 7 ಗಂಟೆಯವರಿಗೂ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು ಸಾರ್.

ಅಧ್ಯಕ್ಷರು : ತೆಗೆದುಕೊಳ್ಳುತ್ತಿದ್ದೇನಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾಳೆಯಿಂದ.